# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ    E-mail : kannadapostnews@gmail.com    / ಕನ್ನಡ post    Price: ₹1

Vol.No.02 | Issue. 186 | Pages. 2 | Date: 03-07-2026, FRIDAY    RNI NO: KARKAN/2024/89601    Kannada Daily

ಸಂಪುಟ : 02 - ಸಂಚಿಕೆ : 186 - ಪುಟಗಳು : 2    03-07-2026 ಶುಕ್ರವಾರ    Ph: 8762954248    ದರ : ₹1


# ರಸ್ತೆ ಬದಿ ಗೂಡಂಗಡಿ ತೆರವು ಕಾರ್ಯಾಚರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ರೈಲ್ವೆ ನಿಲ್ದಾಣ ಹಾಗೂ ಜಿಲ್ಲಾ ಸರ್ಕಾರಿ ಆಸ್ಪತ್ರೆ ಎದುರಿನ ಸಾರ್ವಜನಿಕ ಸ್ಥಳಗಳಲ್ಲಿ ಅನಧಿಕೃತವಾಗಿ ನಿರ್ಮಿಸಲಾಗಿದ್ದ ಗೂಡಂಗಡಿ, ತಳ್ಳುವಗಾಡಿ ಹಾಗೂ ಬೀದಿ ಬದಿ ವ್ಯಾಪಾರ ಮಳಿಗೆಗಳ ಎತ್ತಂಗಡಿ ಕಾರ್ಯ ಶುರುವಾಗಿದೆ.

ಹಾಸನ ಮಹಾನಗರ ಪಾಲಿಕೆ ಗುರುವಾರ ಬೆಳಿಗ್ಗೆ ಜೆಸಿಬಿ ಯಂತ್ರದ ಮೂಲಕ ತೆರವು ಕಾರ್ಯಾಚರಣೆ ನಡೆಸಿತು. ಪಾಲಿಕೆ ಆಯುಕ್ತ ಕೃಷ್ಣಮೂರ್ತಿ ಅವರ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆ ವೇಳೆ ಕೆಲ ವ್ಯಾಪಾರಿಗಳು ಹಾಗೂ ಆಟೋ ಚಾಲಕರು ತೀವ್ರ ವಿರೋಧ ವ್ಯಕ್ತಪಡಿಸಿದರು.

ಬೆಳಗ್ಗೆಯೇ ಆರಂಭವಾದ ಕಾರ್ಯಾಚರಣೆಯಲ್ಲಿ ರೈಲ್ವೆ ನಿಲ್ದಾಣ, ರಸ್ತೆ ಮತ್ತು ಜಿಲ್ಲಾಸ್ಪತ್ರೆ ಎದುರಿನ ಪಾದಚಾರಿ ಮಾರ್ಗವನ್ನು ಅತಿಕ್ರಮಿಸಿ ಕೊಂಡಿದ್ದ ತಾತ್ಕಾಲಿಕ ಗೂಡಂಗಡಿಗಳನ್ನು ತೆರವುಗೊಳಿಸಲಾಯಿತು.

ಜೆಸಿಬಿ ಮೂಲಕ ಅಂಗಡಿಗಳನ್ನು ತೆರವುಗೊಳಿಸುತ್ತಿದ್ದಂತೆ ಕೆಲ ವ್ಯಾಪಾರಿಗಳು ಅಧಿಕಾರಿಗಳೊಂದಿಗೆ ವಾಗ್ವಾದ ನಡೆಸಿ, ಜೀವನೋಪಾಯ ಕಸಿದುಕೊಳ್ಳಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ವ್ಯಾಪಾರಿಗಳು,



ನಗರದ ಅನೇಕ ಕಡೆಗಳಲ್ಲಿ ಇದೇ ರೀತಿ ಬೀದಿ ಬದಿ ಅಂಗಡಿಗಳು ಕಾರ್ಯನಿರ್ವಹಿಸುತ್ತಿವೆ. ಆಯ್ದ ಕೆಲವರ ಅಂಗಡಿಗಳನ್ನು ಮಾತ್ರ ತೆರವುಗೊಳಿಸುವುದು ನ್ಯಾಯ ಸಮ್ಮತವಲ್ಲ. ಪಾಲಿಕೆಗೆ ಪ್ರತಿದಿನ ಶುಲ್ಕ ಪಾವತಿಸುತ್ತಿದ್ದರೂ ಯಾವುದೇ ಲಿಖಿತ ನೋಟಿಸ್ ನೀಡದೆ ಏಕಾಏಕಿ ತೆರವು ಕಾರ್ಯಾಚರಣೆ ನಡೆಸಿರುವುದು ಸರಿಯಾದ ಕ್ರಮವಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬಡ ಕುಟುಂಬಗಳ ಜೀವನೋಪಾಯಕ್ಕೆ ಈ ಅಂಗಡಿಗಳೇ ಆಧಾರವಾಗಿದ್ದು, ಪರ್ಯಾಯ ವ್ಯವಸ್ಥೆ ಕಲ್ಪಿಸದೆ ತೆರವು ಗೊಳಿಸಿರುವುದು ಸಂಕಷ್ಟಕ್ಕೆ ದೂಡಿದೆ ಎಂದು ಆರೋಪಿಸಿದರು.

ಈ ಕುರಿತು ಮಾತನಾಡಿದ ಪಾಲಿಕೆ ಆಯುಕ್ತ ಕೃಷ್ಣಮೂರ್ತಿ, ರೈಲ್ವೆ ರಸ್ತೆ ಹಾಗೂ ಜಿಲ್ಲಾಸ್ಪತ್ರೆ ಎದುರಿನ ಪಾದಚಾರಿ ಮಾರ್ಗಗಳನ್ನು ಸಾರ್ವಜನಿಕರ ಓಡಾಟಕ್ಕೆ ಮುಕ್ತಗೊಳಿಸುವ ಉದ್ದೇಶದಿಂದ ಕಾರ್ಯಾಚರಣೆ ಕೈಗೊಳ್ಳಲಾಗಿದೆ ಎಂದು ಸ್ಪಷ್ಟಪಡಿಸಿದರು. ಸಾರ್ವಜನಿಕ ಸ್ಥಳಗಳಲ್ಲಿ ಅನಧಿಕೃತವಾಗಿ ಗೂಡಂಗಡಿ ನಿರ್ಮಿಸಿ ವ್ಯಾಪಾರ ನಡೆಸುವುದು ನಿಯಮಬಾಹಿರ.

ಬೆಳಗ್ಗೆ 6 ಗಂಟೆಗೇ ಸ್ಥಳ ಖಾಲಿ ಮಾಡುವಂತೆ ಎಚ್ಚರಿಕೆ ನೀಡಲಾಗಿತ್ತು. ಯಾರೂ ಸ್ಪಂದಿಸದ ಕಾರಣ, 10 ಗಂಟೆ ನಂತರ ತೆರವು ಕಾರ್ಯಾಚರಣೆ ನಡೆಸಲಾಗಿದೆ.

ಜಿಲ್ಲಾಸ್ಪತ್ರೆ ಎದುರು ಆಹಾರ ಪದಾರ್ಥ ಮಾರಾಟ ಮಾಡುವಾಗ ಸ್ವಚ್ಛತಾ ನಿಯಮ ಪಾಲಿಸದಿರುವ ಬಗ್ಗೆ ನಿರಂತರ ದೂರು ಕೇಳಿ ಬಂದಿದ್ದವು. ಪಾದಚಾರಿ ಮಾರ್ಗಗಳಲ್ಲಿ ಕಸ, ಬಳಸಿದ ಕಾಫಿ ಲೋಟ, ಎಣ್ಣೆ ಬಾಟಲಿ ಹಾಗೂ ಇತರ ತ್ಯಾಜ್ಯಗಳು ಬಿದ್ದಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿತ್ತು. ಆಸ್ಪತ್ರೆ ಪ್ರದೇಶದಲ್ಲಿ ಸ್ವಚ್ಛತೆ ಕಾಪಾಡುವುದು ಅಗತ್ಯ ಎಂದು ಹೇಳಿದರು. ನಗರದಾದ್ಯಂತ ಹಂತಹಂತವಾಗಿ ಇದೇ ರೀತಿಯ ಅನಧಿಕೃತ ಅತಿಕ್ರಮಣ ತೆರವುಗೊಳಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದರು.

ಬಿ.ಎಂ. ರಸ್ತೆಯಲ್ಲೂ ಇತ್ತೀಚೆಗೆ ಹಣ್ಣಿನ ಅಂಗಡಿ ತೆರವು ಗೊಳಿಸಲಾಗಿತ್ತು. ಸಾರ್ವಜನಿಕ ದೂರು ಬಂದ ಕಡೆ ಕ್ರಮ ಕೈಗೊಳ್ಳಲಾಗುವುದು.

ಸಾರ್ವಜನಿಕರ ಸುರಕ್ಷತೆ, ಪಾದಚಾರಿಗಳ ಅನುಕೂಲ ಹಾಗೂ ನಗರ ಸ್ವಚ್ಛತೆ ಕಾಪಾಡುವುದು ಪಾಲಿಕೆಯ ಪ್ರಮುಖ ಹೊಣೆಗಾರಿಕೆಯಾಗಿದೆ. ಆದ್ದರಿಂದ ತಳ್ಳುವ ಗಾಡಿ ಹಾಗೂ ಗೂಡಂಗಡಿಗಳನ್ನು ಎಲ್ಲೆಂದರಲ್ಲಿ ಸ್ಥಾಪಿಸಲು ಅವಕಾಶ ನೀಡಲಾಗುವುದಿಲ್ಲ ಎಂದು ಅವರು ಹೇಳಿದರು.

ಈ ವೇಳೆ ಪಾಲಿಕೆ ಆರೋಗ್ಯಾಧಿಕಾರಿಗಳು, ಕಂದಾಯ ವಿಭಾಗದ ಸಿಬ್ಬಂದಿ, ಇತರ ಅಧಿಕಾರಿಗಳು ಹಾಗೂ ಸಿಬ್ಬಂದಿ ಭಾಗವಹಿಸಿದ್ದರು. ಕಾರ್ಯಾಚರಣೆ ವೇಳೆ ಕೆಲಕಾಲ ಉದ್ವಿಗ್ನ ವಾತಾವರಣ ನಿರ್ಮಾಣವಾದರೂ ಬಳಿಕ ಪರಿಸ್ಥಿತಿ ನಿಯಂತ್ರಣಕ್ಕೆ ಬಂತು.

# ಎತ್ತಿನಹೊಳೆ ಪರಿಹಾರ ವಿಚಾರದಲ್ಲಿ 'ಕ್ರೆಡಿಟ್ ವಾರ್'




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ (ಬೇಲೂರು): ರೈತರಿಗೆ ಸೇರಬೇಕಾದ ಪರಿಹಾರ ಹಣ ಬಿಡುಗಡೆಯ ಶ್ರೇಯಸ್ಸಿನ ವಿಚಾರವಾಗಿ ಸಚಿವ ರಾಮಲಿಂಗಾರೆಡ್ಡಿ ಅವರ ಸಮ್ಮುಖದಲ್ಲೇ ಶಾಸಕರಾದ ಕೆ.ಎಂ. ಶಿವಲಿಂಗೇಗೌಡ ಹಾಗೂ ಹೆಚ್.ಕೆ. ಸುರೇಶ್ ಅವರ ನಡುವೆ ತೀವ್ರ ವಾಗ್ವಾದ ನಡೆದ ಘಟನೆ ಬೇಲೂರು ತಾಲೂಕಿನ ಗಂಗೂರು ಗ್ರಾಮದಲ್ಲಿ ನಿನ್ನೆ ಸಂಜೆ ಜರುಗಿದೆ.

ಎತ್ತಿನಹೊಳೆ ಯೋಜನೆ ಕಾಮಗಾರಿ ಪರಿಶೀಲನೆಗಾಗಿ ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಅವರು ಗಂಗೂರು ಗ್ರಾಮಕ್ಕೆ ಆಗಮಿಸಿದ್ದರು. ಈ ಯೋಜನೆಗಾಗಿ ತಮ್ಮ ಜಮೀನುಗಳನ್ನು ಕಳೆದುಕೊಂಡಿರುವ ರೈತರು, ತಮಗೆ ಸರ್ಕಾರದಿಂದ ಬಿಡುಗಡೆಯಾಗಬೇಕಿರುವ 28 ಕೋಟಿ ರೂ.ಗಳ ಪರಿಹಾರ ಹಣದ ಕುರಿತು ಸಚಿವರಿಗೆ ಮನವಿ ಸಲ್ಲಿಸುತ್ತಿದ್ದರು.

ರೈತರು ಸಚಿವರೊಂದಿಗೆ ಮಾತನಾಡುತ್ತಿದ್ದ ವೇಳೆ ಮಧ್ಯಪ್ರವೇಶಿಸಿದ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು, "ನಾನೇ ಖುದ್ದಾಗಿ ಮಾತನಾಡಿ 28 ಕೋಟಿ ರೂ. ಹಣವನ್ನು ಬಿಡುಗಡೆ ಮಾಡಿಸಿದ್ದೇನೆ" ಎಂದು ಹೇಳಿದರು.

ಇದು ಸ್ಥಳೀಯ ಶಾಸಕ ಹೆಚ್.ಕೆ. ಸುರೇಶ್ ಅವರ ಆಕ್ರೋಶಕ್ಕೆ ಕಾರಣವಾಯಿತು. "ಎಲ್ಲದರಲ್ಲೂ ನಂದೇ, ನಂದೇ ಎಂದು ಹೇಳಿಕೊಳ್ಳಲು ಬರುತ್ತೀರಿ. ನನ್ನ ಕ್ಷೇತ್ರದಲ್ಲಿ ಮಾತನಾಡಲು ನೀವ್ಯಾರು?" ಎಂದು ಅವರು ಗರಂ ಆಗಿ ಪ್ರಶ್ನಿಸಿದರು. ಇದಕ್ಕೆ ತಕ್ಷಣವೇ ತಿರುಗೇಟು ನೀಡಿದ ಶಿವಲಿಂಗೇಗೌಡ ಅವರು, "ಹೌದು, 28 ಕೋಟಿ ರೂ. ತರಿಸಿರುವವನು ನಾನು. ಅದನ್ನು ನೀನು ಹೇಳು" ಎಂದು ಪಟ್ಟು ಹಿಡಿದರು. ಇಬ್ಬರು ನಾಯಕರ ನಡುವಿನ ಈ ವಾಕ್ಸಮರ ಕೆಲಕಾಲ ತೀವ್ರ ಬಿಗುವಿನ ವಾತಾವರಣ ನಿರ್ಮಾಣ ಮಾಡಿತ್ತು.

ಮೂಕಪ್ರೇಕ್ಷಕರಾದ ಸಚಿವರು ಹಾಗೂ ಅಧಿಕಾರಿಗಳು:

ಸಾರ್ವಜನಿಕವಾಗಿ ಹಾಗೂ ರೈತರ ಎದುರಲ್ಲೇ ಇಬ್ಬರು ಶಾಸಕರು ಏರುಧ್ವನಿಯಲ್ಲಿ ಕಿತ್ತಾಡುತ್ತಿದ್ದರೂ, ಸ್ಥಳದಲ್ಲಿದ್ದ ಸಚಿವ ರಾಮಲಿಂಗಾರೆಡ್ಡಿ ಹಾಗೂ ಜಿಲ್ಲಾಡಳಿತದ ಅಧಿಕಾರಿಗಳು ಅಸಹಾಯಕರಾಗಿ ಮೂಕಪ್ರೇಕ್ಷಕರಂತೆ ನಿಂತಿದ್ದರು.

ಅಂತಿಮವಾಗಿ ಪರಿಸ್ಥಿತಿ ವಿಕೋಪಕ್ಕೆ ತಿರುಗುವುದನ್ನು ಅರಿತ ಪೊಲೀಸ್ ಅಧಿಕಾರಿಗಳು ತಕ್ಷಣವೇ ಮಧ್ಯಪ್ರವೇಶಿಸಿ, ಇಬ್ಬರೂ ಶಾಸಕರನ್ನು ಸಮಾಧಾನಪಡಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿದರು.

# ವಿದ್ಯಾರಂಭಂ ಕಾರ್ಯಕ್ರಮ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಗುವಿನಲ್ಲಿ ಭಾಷಾ ಸಾಮರ್ಥ್ಯ ಜ್ಞಾನದ ವಿಸ್ತರಣೆ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸಲು ಇಡುವ ಮೊದಲ ಹೆಜ್ಜೆ ವಿದ್ಯಾರಂಭಂ ಅಥವಾ ಅಕ್ಷರಭ್ಯಾಸ ಎಂದು ಟೈಮ್ಸ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಬಿ.ಕೆ. ಟೈಮ್ಸ್ ಗಂಗಾಧರ್ ಹೇಳಿದರು.

ನಗರದ ಸೀತಾರಾಮಂಜನೇಯ ದೇವಸ್ಥಾನದಲ್ಲಿ ಈಚೆಗೆ ವಿಜಯನಗರ ಬಡಾವಣೆಯಲ್ಲಿರುವ ಟೈಮ್ಸ್ ಅಂತರಾಷ್ಟ್ರೀಯ ಶಾಲೆ ವತಿಯಿಂದ ನಡೆದ ವಿದ್ಯಾರಂಭಂ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಭಾರತೀಯ ಸಂಸ್ಕೃತಿ ಹಾಗೂ ಪರಂಪರೆ ಅನನ್ಯ ಹಾಗೂ ಅಜರಾಮರ ಈ ಹಿನ್ನೆಲೆಯಲ್ಲಿ ಶಿಕ್ಷಣ ಕಲಿಯಲು ಹೊಸದಾಗಿ ಆಗಮಿಸಿರುವ ಪುಟಾಣಿ ಮಕ್ಕಳಿಗೆ ಅಕ್ಷರಭ್ಯಾಸ ಹಮ್ಮಿಕೊಂಡಿದ್ದು, ನಮ್ಮ ಮಕ್ಕಳಿಗೆ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರಗಳನ್ನು ಕಲಿಸಿ ದೇಶದ ಸುಸಂಸ್ಕೃತ ಪ್ರಜೆಗಳನ್ನಾಗಿ ನಿರ್ಮಿಸುತ್ತೇವೆ. ಅಕ್ಷರಭ್ಯಾಸವು ಜ್ಞಾನದ ಅಧಿದೇವತೆಯಾದ ಸರಸ್ವತಿ ದೇವಿಯ ಆಶೀರ್ವಾದದೊಂದಿಗೆ ಮಗು ಅಕ್ಷರ ಲೋಕಕ್ಕೆ ಕಾಲಿಡುವ ಶುಭಗಳಿಗೆಯಾಗಿದೆ. ಅಕ್ಷರಗಳ ಜಗತ್ತಿಗೆ ಹೆಜ್ಜೆ ಇಡುತ್ತಿರುವ ನಿಮ್ಮ ಪುಟ್ಟ ಕಂದನಿಗೆ ಜ್ಞಾನ, ಬುದ್ಧಿ ಮತ್ತು ಯಶಸ್ಸು ಲಭಿಸಲಿ ಎಂದರು.

# ಭೋವಿ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ : ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ಭೋವಿ ಸಮಾಜ ಬಲವರ್ಧನೆ ಆಗಬೇಕಾದರೆ ಶಿಕ್ಷಣದಿಂದ ಮಾತ್ರ ಸಾಧ್ಯ. ಈ ನಿಟ್ಟಿನಲ್ಲಿ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುವ ಜತೆಗೆ ಶಿಕ್ಷಣದ ಮಹತ್ವ ಹೇಳಿಕೊಡುವ ಕೆಲಸವನ್ನ ತಾಲೂಕು ಭೋವಿ ಸಮಾಜ ಮಾಡಲು ಹೊರಟಿದೆ ಎಂದು ಸಮಾಜದ ಕಾರ್ಯಾಧ್ಯಕ್ಷ ಹಾಗೂ ನಗರ ಸಭೆ ಮಾಜಿ ಸದಸ್ಯ ಉಮಾಶಂಕರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಎಸ್ಎಸ್ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇ.85 ಫಲಿತಾಂಶದೊಂದಿಗೆ ಉತ್ತೀರ್ಣರಾಗಿರುವ ಸಮಾಜದ ವಿದ್ಯಾರ್ಥಿಗಳಿಗೆ ಭೋವಿ ಸಮಾಜದ ವತಿಯಿಂದ




ಪ್ರತಿಭಾ ಪುರಸ್ಕಾರ ಹಮ್ಮಿಕೊಂಡಿದ್ದು, ಪೋಷಕರು ಹಾಗೂ ಸಮಾಜದ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದುಕೊಳ್ಳುವ ಮೂಲಕ ಸಮುದಾಯದ ಇತರ ವಿದ್ಯಾರ್ಥಿಗಳಿಗೆ ಆದರ್ಶರಾಗುವಂತೆ ಕರೆ ನೀಡಿದರು.

ಪ್ರತಿಭಾ ಪುರಸ್ಕಾರಕ್ಕೆ ಭಾಜನರಾಗುವ ವಿದ್ಯಾರ್ಥಿಗಳು ಜಾತಿ ದೃಡೀಕರಣ ಪತ್ರ, ಎರಡು ಫೋಟೋ, ತಾವು ತೇರ್ಗಡೆಯಾಗಿರುವ ಎಸ್ ಎಸ್ ಎಲ್ ಸಿ ಅಥವಾ ಪಿಯುಸಿ ಅಂಕಪಟ್ಟಿ ಜತೆಗೆ ಆಧಾರ್ ಕಾರ್ಡನ್ನು 9845006931 /9742447794/ ಅಥವಾ 9742498619 ವಾಟ್ಸಾಪ್ ನಂಬರಿಗೆ ಕಳಿಸಿಕೊಡುವಂತೆ ತಿಳಿಸಿದರು.

ಸಮಾಜದ ಮುಖಂಡ ನಾಗರಾಜ್ ಮಾತನಾಡಿ, ತಾಲೂಕು ಭೋವಿ ಸಮಾಜದ ವತಿಯಿಂದ ಇದೇ ಮೊದಲ ಬಾರಿಗೆ ಭೋವಿ ಸಮಾಜದ ಪ್ರತಿಭಾವಂತ ಮಕ್ಕಳನ್ನು ಗುರುತಿಸಿ ಪ್ರತಿಭಾ ಪುರಸ್ಕಾರ ಮಾಡಲು ಹೊರಟಿದ್ದು, ಸಮಾಜದ ಬಂಧುಗಳು ಇದರ ಪ್ರಯೋಜನ ಪಡೆದುಕೊಳ್ಳುವ ಮೂಲಕ ಸಮಾಜದ ಸಂಘಟನೆಗೆ ಕೈಜೋಡಿಸುವಂತೆ ಮನವಿ ಮಾಡಿದರು. ಪ್ರತಿಭಾ ಪುರಸ್ಕಾರಕ್ಕೆ ಹೆಸರು ನೋಂದಾಯಿಸಿಕೊಳ್ಳಲು ಜು.10 ಕೊನೆಯ ದಿನಾಂಕವಾಗಿದೆ. ಪ್ರತಿಭಾ ಪುರಸ್ಕಾರದ ದಿನಾಂಕವನ್ನು ಶೀಘ್ರದಲ್ಲಿ ಘೋಷಣೆ ಮಾಡಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಕಾಂತರಾಜ್, ಭೋವಿ ಸಮಾಜದ ಮುಖಂಡರಾದ ಪಡುವನಹಳ್ಳಿ ಶಿವಣ್ಣ, ಸಂಘದ ಖಜಾಂಚಿ ಲೋಹಿತ್ ಮೊದಲಾದವರಿದ್ದರು.

# ಎಸ್‌ಐಆರ್ ಪರಿಷ್ಕರಣೆ ಕಾರ್ಯ ಶುರು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಮಾಡಾಳು: ಅರಸೀಕೆರೆ ತಾಲೂಕಿನ ಮಾಡಾಳು ಗ್ರಾಮದಲ್ಲಿ ಚುನಾವಣಾ ಆಯೋಗ ರಾಜ್ಯಾದ್ಯಂತ ನಡೆಸುತ್ತಿರುವ ಮತದಾರರ ಪಟ್ಟಿ ಪರಿಷ್ಕರಣೆ ಹಿನ್ನೆಲೆಯಲ್ಲಿ ಬಿಎಲ್‌ಓ ಗಳು ಮನೆ ಮನೆಗೆ ತೆರಳಿ ಪರಿಷ್ಕರಣೆ ಕಾರ್ಯ ಆರಂಭಿಸಿದರು.

ಮಾಡಾಳು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಐದು ಬೂತ್‌ಗಳ ಪೈಕಿ ಎರಡನೇ ಬೂತ್‌ನ ಮನೆಗಳಿಗೆ ಭೇಟಿ ನೀಡಿದ ಬಿಎಲ್‌ಓ ಆನಂದ್ ಅವರು ಎಸ್‌ಐಆರ್ ಪ್ರಕ್ರಿಯೆಯಲ್ಲಿ ಮತದಾರರು ಹೆಚ್ಚಿನ ಜವಾಬ್ದಾರಿ ಹಾಗೂ ಎಚ್ಚರಿಕೆಯಿಂದ ಸಮಗ್ರ ಮಾಹಿತಿ ನೀಡಬೇಕು ಎಂದರು. ಎರಡನೇ ಬ್ಲಾಕ್ ಮನೆ ಮನೆಗೆ ಭೇಟಿ ನೀಡಿದ ಅವರು, ಮನೆಯ ಸದಸ್ಯರು ಅಧಿಕಾರಿಗಳು ನೀಡುವ ಅರ್ಜಿ ಭರ್ತಿ ಮಾಡಿ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ ಕಾರ್ಯಕ್ಕೆ ಸಹಕಾರ ನೀಡಬೇಕು ಎಂದು ಹೇಳಿದರು.

ಸದಸ್ಯರು ಯಾವುದೇ ಕಾರಣಕ್ಕೂ ಗೊಂದಲಕ್ಕೆ ಒಳಗಾಗಬಾರದು. ಮನೆಯಲ್ಲಿ ಒಬ್ಬರು ಸದಸ್ಯರಿದ್ದು, ಸ್ಥಳದಲ್ಲಿ ಇಲ್ಲದೇ ಇದ್ದರೂ ಅವರನ್ನು ಮತ ಪಟ್ಟಿ ಪರಿಷ್ಕರಣೆಗೆ ಸೇರ್ಪಡೆ ಮಾಡಬಹುದು.

ಆದರೆ ಮರಣ ಹೊಂದಿದವರನ್ನು ಮತದಾರರ ಪಟ್ಟಿಯಿಂದ ಕೈಬಿಡಲಾಗುವುದು ಎಂದು ಅವರು ತಿಳಿಸಿದರು.

ಈ ವೇಳೆ ಎರಡನೇ ಬ್ಲಾಕ್‌ನ ಬಿಎಲ್‌ಎಗಳಾದ ಎಂ.ಟಿ ರಂಗನಾಥ್, ಮಾಡಾಳು ಶಿವಲಿಂಗಪ್ಪ, ಎಂ.ಡಿ ಸೋಮಶೇಖರ್, ಕೆ. ತಿಮ್ಮಯ್ಯ ದಾಸಪ್ಪ, ಎಂ. ರವಿ ಪರಿಷ್ಕರಣೆ ಕಾರ್ಯಕ್ಕೆ ಅಧಿಕಾರಿಗಳಿಗೆ ನೇರವಾದರು.

# ಮನೆಗೊಂದು ಗ್ರಂಥಾಲಯ ಅನುಷ್ಠಾನ ಅರ್ಥಪೂರ್ಣ ಕಾರ್ಯಕ್ರಮ : ಡಾ. ಮಾನಸ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಒಳಿತನ್ನು ನಾವು ಎಲ್ಲಾ ಕಡೆಗಳಿಂದಲೂ ಸ್ವೀಕರಿಸಬೇಕು. ಮನೆಗೊಂದು ಗ್ರಂಥಾಲಯ ಅನುಷ್ಠಾನವು ಬಹು ಆಯಾಮದ ಕಾರ್ಯಕ್ರಮವಾಗಿದೆ. ಪುಸ್ತಕ ಪ್ರಾಧಿಕಾರದ ಕಟ್ಟಡದ ಹೊರಗೆ ರಾಜ್ಯದ ವಿವಿಧ ಭಾಗಗಳಲ್ಲಿ ಗ್ರಂಥಾಲಯದ ಮೂಲಕ ಜ್ಞಾನದ ಹಣತೆಯನ್ನು ಹಚ್ಚಲು ಹೊರಟಿದ್ದೇವೆ ಎಂದು ಬೆಂಗಳೂರಿನ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಮಾನಸ ರವರು ಹೇಳಿದರು.

ನಗರದ ಉದಯಗಿರಿಯ ಕೆಂಪೇಗೌಡ ರಸ್ತೆಯಲ್ಲಿರುವ ನಿವೃತ್ತ ಪ್ರಾಂಶುಪಾಲರಾದ ಎ..ಹೆಚ್.. ಗಣೇಶ್ ಅಂಕಪುರರವರ ನಿವಾಸದಲ್ಲಿ ಓದಲು ಖರೀದಿಸಿ ಕಪಾಟಿನಲ್ಲಿ ಸಂಗ್ರಹಣೆ ಮಾಡಿರುವ ಗ್ರಂಥಾಲಯವನ್ನು ಉದ್ಘಾಟಿಸಿ ಮಾತನಾಡಿದ ಅವರು ಹಾಸನ ಜಿಲ್ಲೆಯಲ್ಲಿ ಕಾರ್ಯಕ್ರಮ ಚಾಲನೆಗೊಂಡಿದ್ದು ಬಹಳ ಶಿಸ್ತುಬದ್ಧವಾಗಿ ಮತ್ತು ಅಚ್ಚುಕಟ್ಟಾಗಿ ಏರ್ಪಾಟಾಗಿರುವುದು ಕಾರ್ಯಕ್ರಮ ಅನುಷ್ಠಾನಕ್ಕೆ ಸಿಕ್ಕ ಯಶಸ್ಸು. ನಾವು ಮನೆ ಕಟ್ಟುವಾಗ, ವಾಸಿಸುವಾಗ ಅಲ್ಲೊಂದು ಪೂಜಾ ಮನೆಯಿರಬೇಕು, ಮಲಗುವ ಕೂರುವ ನಿಲ್ಲುವ ಜಾಗಗಳಿರಬೇಕು. ಅವುಗಳ ತುಂಬಾ ವಿವಿಧ ಪೀಠೋಪಕರಣಗಳಿರಬೇಕು.




ಅದಕ್ಕೆ ಭೂಷಣವಾಗಿ ಲಕ್ಷಾಂತರ ರೂಗಳ ಟಿ.ವಿ., ಹೋಂ ಥಿಯೇಟರ್ ಮತ್ತಿತರ ಐಷಾರಮಿ ಅಲಂಕಾರಿಕ ವಸ್ತುಗಳಿರಬೇಕು. ಅದರಿಂದ ನಮ್ಮ ಮನೆಯ ಪ್ರತಿಷ್ಠೆ ಹೆಚ್ಚಾಗುತ್ತದೆ ಎಂದು ಹಂಬಲಿಸುತ್ತೇವೆ. ನಿಜ, ಅದು ತಪ್ಪಲ್ಲ. ಆದರೆ ಅದಷ್ಟೇ ನಮ್ಮ ಸಂಸ್ಕೃತಿಯಲ್ಲ. ಅದರಿಂದ ನಮಗೆ ನೆಮ್ಮದಿ ಸಿಗುವುದಿಲ್ಲ. ಅದೆಲ್ಲಾ ಸಿಗಬೇಕೆಂದರೆ ಅಲ್ಲೊಂದು ಪುಟ್ಟ ಗ್ರಂಥಾಲಯವಿರಬೇಕು. ಗ್ರಂಥಾಲಯವೆಂದರೆ ಅದೊಂದು ಕೇವಲ ಪುಸ್ತಕಗಳ ಸರಕಲ್ಲ. ನಮ್ಮ ದೇಹದೊಳಗಣ ಆತ್ಮದಂತೆ ನಮ್ಮ ಮನೆಯೆಂಬ ದೇವಾಲಯದ ಜ್ಞಾನ ಸಂಸ್ಕೃತಿಯ ಕಳಶ ಎಂದರು. ಉತ್ತಮ ಓದುಗರನ್ನು ಗುರ್ತಿಸಿ, ವರ್ಷದಲ್ಲಿ ನಾಲ್ಕು ರೀತಿಯ ಪ್ರಶಸ್ತಿಗಳನ್ನು ಪ್ರಾಧಿಕಾರದ ವತಿಯಿಂದ ನೀಡುವ ಮೂಲಕ ಓದುಗರನ್ನು ಪ್ರೋತ್ಸಾಹಿಸಲಾಗುವುದು ಎಂದರು.

ಶಿಕ್ಷಕರು, ಸಾಹಿತಿ ಕೆ.ಎನ್. ಚಿದಾನಂದ ಅವರು ನಾ ಮೆಚ್ಚಿದ ಪುಸ್ತಕ ಎಂಬ ಪರಿಕಲ್ಪನೆಯಲ್ಲಿ ಎಸ್. ಲಲಿತರವರ ಮನದ ಕಣಿವೆಯಿಂದ ಪುಸ್ತಕ ಪರಿಚಯಿಸಿ ಈ ಪುಸ್ತಕದಲ್ಲಿ ಒಟ್ಟು 64 ಲೇಖನಗಳು ಓದುಗರಿಗೆ ಆಸಕ್ತಿ ಬೆಳೆಸುತ್ತವೆ.

ಸಕಲೇಶಪುರದ ಲೇಖಕಿ ಮಲೆನಾಡಿನ ಹಸಿರು, ಮಳೆ, ಮರಗಿಡ ಹಕ್ಕಿ ಪಕ್ಷಿ ಬೆಳಗು ಸಂಜೆ ಮೊದಲಾಗಿ ಸ್ಪೂರ್ತಿ ನೀಡಿವೆ. ವರ್ಷಮೊಂದರಲ್ಲಿ ಬರುವ ವಸಂತ, ಗ್ರೀಷ್ಮ, ವರ್ಷ, ಶರತ್, ಹೇಮಂತ, ಶಿಶಿರ ಋತುಗಳಲ್ಲಿ ಬರುವ ದ್ವಾದಶ ಮಾಸಗಳಲ್ಲಿ ಬೀಳುವ ಮಳೆಯ ಹನಿಗಳು ಲೇಖಕಿಗೆ ಪ್ರೇರಣೆ ನೀಡಿವೆ. ಆಯಾ ಮಾಸಗಳಲ್ಲಿ ಬರುವ ಸಾಂದರ್ಭಿಕ ಹಬ್ಬ ಹರಿದಿನಗಳ ಆಚರಣೆಗಳನ್ನು ಅರ್ಥವತ್ತಾಗಿ ಓದುಗರಿಗೆ ಕಟ್ಟಿ ಕೊಟ್ಟಿದ್ದಾರೆ ಎಂದರು.

ಕಾರ್ಯಕ್ರಮ ಅತಿಥೇಯರಾದ ಎ.ಹೆಚ್. ಗಣೇಶ್ ಅಂಕಪುರ ದಂಪತಿಗಳನ್ನು ಪ್ರಾಧಿಕಾರವು ಸನ್ಮಾನಿಸಿ ಗೌರವಿಸಿತು. ಜ್ಞಾನದ ಸಂಕೇತವೆನಿಸಿದ ಮನೆಗೊಂದು ಗ್ರಂಥಾಲಯದ ಅನುಷ್ಠಾನವು ತಮ್ಮ ಮನೆಯಿಂದ ಪ್ರಾರಂಭವಾಗುತ್ತಿರುವುದಕ್ಕೆ ಗಣೇಶ್ ರವರು ಸಂತಸ ವ್ಯಕ್ತಪಡಿಸಿದರು. ಮುಂದಿನ ದಿನಗಳಲ್ಲೂ ಕಾರ್ಯಕ್ರಮವು ನಿರ್ವಿಘ್ನವಾಗಿ ನೆರವೇರಲಿ ಎಂದು ಶುಭ ಹಾರೈಸಿದರು. ಮನೆಗೊಂದು ಗ್ರಂಥಾಲಯ ಜಾಗೃತ ಸಮಿತಿ ಹಾಸನ ಜಿಲ್ಲೆ ಸಂಚಾಲಕರು, ಸಾಹಿತಿ ಗೊರೂರು ಅನಂತರಾಜು ಪುಸ್ತಕಗಳು ಜ್ಞಾನವಾಹಿನಿಯಾಗಿ ಕಾರ್ಯ ನಿರ್ವಹಿಸುತ್ತವೆ. ಪುಸ್ತಕ ಓದುಗರ ಸಂಖ್ಯೆ ಹೆಚ್ಚಾಗುವಂತೆ ಮಾಡುವುದೇ ಪುಸ್ತಕ ಓದು ಜಾಗೃತಿಯ ಆಶಯ ಎಂದರು. ಗಾಯಕ ಗೊರೂರು ಶ್ರೀಕಾಂತ್ ಪ್ರಾರ್ಥಿಸಿದರು, ಶಶಿಕಲಾ ಜಗದೀಶ್ ನಿರೂಪಿಸಿದರು. ಸೀಮಾ ಮುರಳೀಧರ್ ಸ್ವಾಗತಿಸಿದರು. ಪುಸ್ತಕ ಪ್ರಾಧಿಕಾರದ ಸದಸ್ಯರು ಡಾ. ಕುಶಾಲ ಬರಗೂರು, ಸತ್ಯವತಿ, ಅಧ್ಯಕ್ಷರು ಮಾನವ ಹಕ್ಕುಗಳ ಒಕ್ಕೂಟ,ಹಾಸನ, ಯದುರಾಜ್, ರಾಜಕುಮಾರ್ ಅಂಕಪುರ, ಡಾ. ಸೀಮಾ ಮುರಳೀಧರ, ಶೋಭಾಗಣೇಶ್ ಉಪಸ್ಥಿತರಿದ್ದರು.

# ಜೂನ್ -ಜೂಲೈ, ಶಾಲಾ ವಿದ್ಯಾರ್ಥಿ ಪರಿಷತ್ ಚುನಾವಣೆ ಹಬ್ಬ

## ಶಾಲೆಯ ಪ್ರಗತಿಯ ಭದ್ರ ಅಡಿಪಾಯ

"ಇಂದಿನ ವಿದ್ಯಾರ್ಥಿ ನಾಯಕರು,ನಾಳಿನ ದೇಶದ ನಿರ್ಮಾಪಕರು."ಈ ಸತ್ಯವನ್ನು ವಿದ್ಯಾರ್ಥಿ ಪರಿಷತ್ ಚುನಾವಣೆ ಸ್ಪಷ್ಟವಾಗಿ ಪ್ರತಿಬಿಂಬಿಸುತ್ತದೆ.ಶಾಲೆಯು ಕೇವಲ ಶಿಕ್ಷಣ ನೀಡುವ ಸಂಸ್ಥೆಯಲ್ಲ;ಅದು ಉತ್ತಮ ವ್ಯಕ್ತಿತ್ವ,ನಾಯಕತ್ವ,ಶಿಸ್ತು ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ರೂಪಿಸುವ ಪವಿತ್ರ ಕೇಂದ್ರವಾಗಿದೆ.ಈ ಎಲ್ಲ ಗುಣಗಳನ್ನು ಬೆಳೆಸುವಲ್ಲಿ ವಿದ್ಯಾರ್ಥಿ ಪರಿಷತ್ ಚುನಾವಣೆಯು ಮಹತ್ವದ ಪಾತ್ರವನ್ನು ವಹಿಸುತ್ತದೆ.ವಿದ್ಯಾರ್ಥಿ ಪರಿಷತ್ ಚುನಾವಣೆಯ ಮೂಲಕ ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣ,ಆತ್ಮವಿಶ್ವಾಸ, ಜವಾಬ್ದಾರಿಯುತ ಮನೋಭಾವ ಮತ್ತು ಸೇವಾ ಮನೋಭಾವ ಬೆಳೆಯುತ್ತದೆ. ಚುನಾಯಿತ ಪ್ರತಿನಿಧಿಗಳು ವಿದ್ಯಾರ್ಥಿಗಳ ಅಭಿಪ್ರಾಯಗಳು,ಸಮಸ್ಯೆಗಳು ಮತ್ತು ಸಲಹೆಗಳನ್ನು ಶಾಲಾ ಆಡಳಿತದ ಗಮನಕ್ಕೆ ತಂದು,ಅವುಗಳಿಗೆ ಸೂಕ್ತ ಪರಿಹಾರ ದೊರೆಯುವಂತೆ ಕಾರ್ಯನಿರ್ವಹಿಸುತ್ತಾರೆ. ಇದರಿಂದ ಶಾಲೆಯಲ್ಲಿ ಶಿಸ್ತು, ಸಹಕಾರ ಮತ್ತು ಉತ್ತಮ ವಾತಾವರಣ ನಿರ್ಮಾಣವಾಗುತ್ತದೆ.ಈ ಚುನಾವಣೆ ವಿದ್ಯಾರ್ಥಿಗಳಿಗೆ ಪ್ರಜಾಪ್ರಭುತ್ವದ ಮಹತ್ವ, ಮತದಾನದ ಮೌಲ್ಯ ಹಾಗೂ ನ್ಯಾಯಯುತ ನಿರ್ಧಾರ ಕೈಗೊಳ್ಳುವ ಜವಾಬ್ದಾರಿಯನ್ನು ಅರಿಯುವ ಅವಕಾಶವನ್ನು ಒದಗಿಸುತ್ತದೆ. ಯೋಗ್ಯ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಮೂಲಕ ಶಾಲೆಯ ಅಭಿವೃದ್ಧಿಗೆ ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಅಮೂಲ್ಯ ಕೊಡುಗೆಯನ್ನು ನೀಡುತ್ತಾನೆ. ಈ ಅನುಭವವು ಭವಿಷ್ಯದಲ್ಲಿ ಜವಾಬ್ದಾರಿಯುತ ನಾಗರಿಕರನ್ನು ರೂಪಿಸುವ ದೃಢವಾದ ಅಡಿಪಾಯವಾಗುತ್ತದೆ.

ವಿದ್ಯಾರ್ಥಿ ಪರಿಷತ್ ಚುನಾವಣೆ ಕೇವಲ ಗೆಲುವು?ಸೋಲಿನ ಸ್ಪರ್ಧೆಯಲ್ಲ;ಅದು ಸೇವೆ, ಪ್ರಾಮಾಣಿಕತೆ,ಶಿಸ್ತು ಮತ್ತು ನಾಯಕತ್ವದ ಮೌಲ್ಯಗಳನ್ನು ಪ್ರದರ್ಶಿಸುವ ವೇದಿಕೆಯಾಗಿದೆ.ಆದ್ದರಿಂದ ಪ್ರತಿಯೊಂದು ಚುನಾವಣೆ ನ್ಯಾಯಸಮ್ಮತವಾಗಿ ಮತ್ತು ಗೌರವಯುತವಾಗಿ ನಡೆಯುವುದು ಶಾಲೆಯ ಘನತೆಯನ್ನು ಹೆಚ್ಚಿಸುತ್ತದೆ.

"ಉತ್ತಮ ನಾಯಕತ್ವವು ಉತ್ತಮ ಶಾಲೆಯನ್ನು ನಿರ್ಮಿಸುತ್ತದೆ;ಉತ್ತಮ ಶಾಲೆಯು ಉತ್ತಮ ರಾಷ್ಟ್ರವನ್ನು ರೂಪಿಸುತ್ತದೆ." ಆದ್ದರಿಂದ ವಿದ್ಯಾರ್ಥಿ ಪರಿಷತ್ ಚುನಾವಣೆಯು ಪ್ರತಿಯೊಂದು ಶಾಲೆಯ ಪ್ರಗತಿಗೆ ಅತ್ಯಂತ ಅಗತ್ಯವಾದ ಪ್ರಜಾಪ್ರಭುತ್ವದ ಹಬ್ಬವಾಗಿದೆ.



**ಅಂತೋಣಿ ಮುತ್ತು ವಿ**
**ಶಿಕ್ಷಕರು, 7259675543**

# ಹುಚ್ಚುನಾಯಿ ಕಡಿತ : 8 ಮಂದಿಗೆ ಗಾಯ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲೂಕಿನ ಉಳ್ಳೇನಹಳ್ಳಿ ಗ್ರಾಮದಲ್ಲಿ ಹುಚ್ಚುನಾಯಿ ದಾಳಿ ಮಾಡಿ, ಮಕ್ಕಳು ಸೇರಿದಂತೆ 8 ಮಂದಿಗೆ ಕಚ್ಚಿ ಗಾಯಗೊಳಿಸಿದೆ. ಇದರಿಂದ ಗ್ರಾಮದ ಆತಂಕದ ವಾತಾವರಣ ನಿರ್ಮಾಣ ಆಗಿದೆ.

ಹುಚ್ಚುನಾಯಿಯೊಂದು ಏಕಾಏಕಿ ಗ್ರಾಮದಲ್ಲಿ ಸಿಕ್ಕಸಿಕ್ಕವರ ಮೇಲೆ ದಾಳಿ ನಡೆಸಿ ಮಕ್ಕಳು ಸೇರಿ ಎಂಟು ಮಂದಿಯನ್ನು ಕಚ್ಚಿ ಗಾಯಗೊಳಿಸಿದೆ. ಮನೆಯ ಮುಂದೆ ಆಟವಾಡುತ್ತಿದ್ದ ಮಕ್ಕಳು ಹಾಗೂ ರಸ್ತೆ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದವರ ಮೇಲೆ ನಾಯಿ ದಾಳಿ ನಡೆಸಿದ್ದು, ಗ್ರಾಮದಲ್ಲಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಗಾಯಗೊಂಡವರಲ್ಲಿ ರಾಜು, ರಘು, ಅಂಜಲಿ, ಮಂಜಯ್ಯ ಸೇರಿದಂತೆ ಇಬ್ಬರು ಮಕ್ಕಳು ಸೇರಿದ್ದಾರೆ. ಇನ್ನು ಕೆಲವರಿಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ತಿಳಿದುಬಂದಿದೆ.

ಗಾಯಾಳುಗಳನ್ನು ತಕ್ಷಣ ಕೊಣನೂರು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ವೈದ್ಯರು ಅಗತ್ಯ ಚಿಕಿತ್ಸೆ ಹಾಗೂ ಲಸಿಕೆ ನೀಡುತ್ತಿರುವುದಾಗಿ ತಿಳಿದುಬಂದಿದೆ.

ಉಳ್ಳೇನಹಳ್ಳಿ ಗ್ರಾಮದಲ್ಲಿ ಬೀದಿ ನಾಯಿಗಳ ಹಾವಳಿ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಈ ಬಗ್ಗೆ ಹಲವು ಬಾರಿ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೂ ಶಾಶ್ವತ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಈ ಘಟನೆ ಬಳಿಕ ಗ್ರಾಮಸ್ಥರಲ್ಲಿ ಭಯದ ವಾತಾವರಣ ನಿರ್ಮಾಣವಾಗಿದ್ದು, ಮಕ್ಕಳು ಹೊರಗೆ ಆಟವಾಡಲು ಪೋಷಕರು ಆತಂಕ ವ್ಯಕ್ತಪಡಿಸುತ್ತಿದ್ದಾರೆ. ಗ್ರಾಮದಲ್ಲಿ ಬೀದಿ ನಾಯಿಗಳನ್ನು ನಿಯಂತ್ರಿಸಿ ಸಾರ್ವಜನಿಕರ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಗ್ರಾಮಸ್ಥರು ಸಂಬಂಧಪಟ್ಟ ಇಲಾಖೆಯನ್ನು ಆಗ್ರಹಿಸಿದ್ದಾರೆ.

# ಪತ್ರಕರ್ತರ ದೈಹಿಕ-ಮಾನಸಿಕ ಆರೋಗ್ಯ ವೃದ್ಧಿಗೆ ಕ್ರೀಡೆ ಸಹಕಾರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪತ್ರಕರ್ತರು ಸಮಾಜದ ಕಣ್ಣುಗಳಾಗಿದ್ದು, ಅವರ ದೈಹಿಕ ಮತ್ತು ಮಾನಸಿಕ ಆರೋಗ್ಯ ವೃದ್ಧಿಗೆ ಇಂತಹ ಕ್ರೀಡಾಕೂಟಗಳು ಅತ್ಯಂತ ಅಗತ್ಯವೆಂದು, ಪತ್ರಕರ್ತರಲ್ಲಿ ಆರೋಗ್ಯಕರ ಜೀವನಶೈಲಿ, ಪರಸ್ಪರ ಸ್ನೇಹ-ಸೌಹಾರ್ದ ಮತ್ತು ಕ್ರೀಡಾಸ್ಫೂರ್ತಿಯನ್ನು ಉತ್ತೇಜಿಸುವ ಉದ್ದೇಶದಿಂದ ಹಾಸನ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಆಯೋಜಿಸಿರುವ ನಗರದ ಹಾಸನಾಂಬ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಉದ್ಘಾಟನಾ ಸಮಾರಂಭದಲ್ಲಿ ಜಿಲ್ಲಾ ಮಟ್ಟದ ಬ್ಯಾಡ್ಮಿಂಟನ್ ಕ್ರೀಡಾಕೂಟಕ್ಕೆ ವಿವಿಧ ಕ್ಷೇತ್ರಗಳ ಗಣ್ಯರು ಶುಭ ಹಾರೈಸಿದರು.

ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಆನಂದ್‌ಮೂರ್ತಿ ಮಾತನಾಡಿ, ಹಾಸನಾಂಬ ಒಳಾಂಗಣ ಕ್ರೀಡಾಂಗಣದಲ್ಲಿ ಕೆಲವು ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿರುವುದರಿಂದ ಆರಂಭದಲ್ಲಿ ಸ್ವಲ್ಪ ತೊಂದರೆ ಎದುರಾದರೂ, ಸ್ಪರ್ಧೆಗಳಿಗೆ ಯಾವುದೇ ಅಡಚಣೆ ಉಂಟಾಗದಂತೆ ಅಗತ್ಯ ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆ ಎಂದು ತಿಳಿಸಿದರು. ಜಿಲ್ಲಾದ್ಯಂತದ ಪತ್ರಕರ್ತರು ಒಂದೇ ವೇದಿಕೆಯಲ್ಲಿ ಸೇರಿ ಕ್ರೀಡಾ ಮನೋಭಾವದಿಂದ ಭಾಗವಹಿಸುತ್ತಿರುವುದು ಶ್ಲಾಘನೀಯ ಬೆಳವಣಿಗೆ ಯಾಗಿದ್ದು, ಕ್ರೀಡಾಕೂಟ ಯಶಸ್ವಿಯಾಗಿ ನಡೆಯಲಿ ಎಂದು ಹಾರೈಸಿದರು.



ಸಮಾಜಸೇವಕ ಅಮ್ಜದ್‌ಖಾನ್ ಮಾತನಾಡಿ, ಸಮಾಜಸೇವೆ ಎನ್ನುವುದು ಎಲ್ಲರ ಸಹಕಾರದಿಂದ ಮಾತ್ರ ಯಶಸ್ವಿಯಾಗುವ ಕಾರ್ಯ. ಪತ್ರಕರ್ತರೊಂದಿಗೆ ತಮ್ಮ ಆತ್ಮೀಯ ಸಂಬಂಧ ಹಲವು ವರ್ಷಗಳಿಂದ ಮುಂದುವರಿದಿದ್ದು, ಸಮಾಜಮುಖಿ ಕಾರ್ಯಗಳಲ್ಲಿ ಪತ್ರಕರ್ತರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘವು ಕ್ರೀಡೆಗೆ ಆದ್ಯತೆ ನೀಡಿ ಆಯೋಜಿಸಿರುವ ಈ ಪಂದ್ಯಾವಳಿ ಯಶಸ್ವಿಯಾಗಿ ನೆರವೇರಲಿ ಎಂದು ಶುಭ ಕೋರಿದರು.

ಎಂ.ಎಂ. ಆಸ್ಪತ್ರೆಯ ಡಾ. ಉಮೇಶ್ ಮಾತನಾಡಿ, ಆರೋಗ್ಯ ಸೇವೆಯನ್ನು ಕೇವಲ ಆಸ್ಪತ್ರೆಯೊಳಗೆ ಸೀಮಿತಗೊಳಿಸದೇ ಜನರ ಮನೆ ಬಾಗಿಲಿಗೆ ತಲುಪಿಸುವ ಉದ್ದೇಶದಿಂದ ಹಲವಾರು ಸಮಾಜಮುಖಿ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ ಎಂದರು.

ಪುಷ್ಪಗಿರಿ ಮಠದ ಸಹಯೋಗದಲ್ಲಿ ಆರಂಭಿಸಿರುವ ಪುಷ್ಪಗಿರಿ ಉಚಿತ ಸಂಚಾರಿ ಕ್ಲಿನಿಕ್ ಯೋಜನೆಗೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ದೊರೆತಿದೆ.

ಸ್ವಾಮೀಜಿಗಳ ಮಾರ್ಗದರ್ಶನದಲ್ಲಿ ಆರಂಭವಾದ ಈ ಮೊಬೈಲ್ ಕ್ಲಿನಿಕ್ ಪ್ರಸ್ತುತ ಬೇಲೂರು ತಾಲ್ಲೂಕಿನಲ್ಲಿ ಸೇವೆ ನೀಡುತ್ತಿದ್ದು, ಮುಂದಿನ ದಿನಗಳಲ್ಲಿ ಜಿಲ್ಲೆಯ ಎಲ್ಲ ಭಾಗಗಳಿಗೂ ವಿಸ್ತರಿಸುವ ಉದ್ದೇಶ ಹೊಂದಿದ್ದೇವೆ ಎಂದು ತಿಳಿಸಿದರು. ಬಡ ಮತ್ತು ಗ್ರಾಮೀಣ ಭಾಗದ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆ ತಲುಪಿಸುವಲ್ಲಿ ಈ ಯೋಜನೆ ಮಹತ್ವದ ಪಾತ್ರ ವಹಿಸಲಿದೆ ಎಂದು ಹೇಳಿದರು.

ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಬಿ. ಮದನ್‌ಗೌಡ ಹಾಗೂ ಜಿಲ್ಲಾಧ್ಯಕ್ಷ ಜೆ.ಆರ್. ಕೆಂಚೇಗೌಡ ಮಾತನಾಡಿ, ನಿರಂತರ ಒತ್ತಡದ ನಡುವೆ ಕೆಲಸ ಮಾಡುವ ಪತ್ರಕರ್ತರಿಗೆ ಕ್ರೀಡೆ ಉತ್ತಮ ಮಾನಸಿಕ ನೆಮ್ಮದಿ ಹಾಗೂ ದೈಹಿಕ ಆರೋಗ್ಯ ನೀಡುತ್ತದೆ.

ಪತ್ರಕರ್ತರಲ್ಲಿ ಪರಸ್ಪರ ಬಾಂಧವ್ಯ ಗಟ್ಟಿಗೊಳಿಸುವಲ್ಲಿ ಇಂತಹ ಕ್ರೀಡಾ ಕೂಟಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದು ಹೇಳಿದರು.

ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ ಆಗಮಿಸಿದ್ದ ಪತ್ರಕರ್ತರು ಪಂದ್ಯಾವಳಿಯಲ್ಲಿ ಉತ್ಸಾಹದಿಂದ ಪಾಲ್ಗೊಂಡು ಕ್ರೀಡಾಕೂಟಕ್ಕೆ ಮೆರುಗು ತಂದರು. ಭಾಗವಹಿಸಿದ ಎಲ್ಲ ಸ್ಪರ್ಧಾಳುಗಳಿಗೆ ಗಣ್ಯರು ಶುಭ ಹಾರೈಸಿ, ಕ್ರೀಡಾ ಮನೋಭಾವದಿಂದ ಸ್ಪರ್ಧಿಸುವಂತೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಪ್ರಸನ್ನಕುಮಾರ್, ರವಿ ನಾಕಲಗೂಡು, ಅತೀಕ್ ಉರ್ ರೆಹಮನ್, ಪ್ರಧಾನ ಕಾರ್ಯದರ್ಶಿ ಕೆ.ಜಿ. ಸುರೇಶ್, ಉಪಾಧ್ಯಕ್ಷ ಜಿ. ಪ್ರಕಾಶ್, ರಾಷ್ಟ್ರೀಯ ಮಂಡಳಿ ಸದಸ್ಯರಾದ ನಾಗರಾಜು ಹೆತ್ತೂರ್, ಕಾರ್ಯದರ್ಶಿ ಕೆ.ಎಂ. ಹರೀಶ್, ನಟರಾಜು ಸೇರಿದಂತೆ ಸಂಘದ ಹಲವು ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಸದಸ್ಯರು ಉಪಸ್ಥಿತರಿದ್ದರು.

## ವೈದ್ಯಕೀಯ ಸೇವೆ ದೇವರ ಸೇವೆಗೆ ಸಮಾನ : ಡಾ. ಜಯಚಂದ್ರ ಗುಪ್ತ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ವೈದ್ಯಕೀಯ ಸೇವೆ ಭೂಮಿಯ ಮೇಲಿನ ಅತ್ಯಂತ ಪವಿತ್ರ ಸೇವೆಯಾಗಿದ್ದು, ರೋಗಿಗಳ ಸೇವೆ ಮಾಡುವುದು ದೇವರ ಸೇವೆ ಮಾಡಿದಷ್ಟೇ ಪುಣ್ಯದ ಕಾರ್ಯ. ವೈದ್ಯಕೀಯ ವೃತ್ತಿಯನ್ನು ಕೇವಲ ಆದಾಯದ ಮೂಲವೆಂದು ಪರಿಗಣಿಸದೆ ಸಮಾಜ ಸೇವೆಯಾಗಿ ಸ್ವೀಕರಿಸಿದಾಗ ಮಾತ್ರ ಅದರ ನಿಜವಾದ ಮೌಲ್ಯ ಉಳಿಯುತ್ತದೆ ಎಂದು ಹಿರಿಯ ವೈದ್ಯ ಡಾ. ಜಯಚಂದ್ರ ಗುಪ್ತ ಅಭಿಪ್ರಾಯಪಟ್ಟರು.

ನಗರದ ಹೋಟೆಲ್ ಉಡುಪಿ ಸಭಾಂಗಣದಲ್ಲಿ ರೋಟರಿ ಕ್ಲಬ್ ಆಫ್ ಕ್ವಾಂಟಾ ಹಾಸನ ವತಿಯಿಂದ ವೈದ್ಯರ ದಿನಾಚರಣೆ ಅಂಗವಾಗಿ ಬುಧವಾರ ಸಂಜೆ ಆಯೋಜಿಸಿದ್ದ 'ಹಾಸನ್ ಮೆಡಿಕಲ್ ಐಕಾನ್ ಅವಾರ್ಡ್?2026' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಗೌರವ ಸ್ವೀಕರಿಸಿ ಅವರು ಮಾತನಾಡಿ, "ಕಳೆದ ಐವತ್ತು ವರ್ಷಗಳ ವೈದ್ಯಕೀಯ ಸೇವೆಯ ಪಯಣದಲ್ಲಿ ಸಾವಿರಾರು ರೋಗಿಗಳಿಗೆ ಚಿಕಿತ್ಸೆ ನೀಡುವ ಅವಕಾಶ ನನಗೆ ದೊರೆಯಿತು. ರೋಗಿಗಳ ನೋವನ್ನು ಕಡಿಮೆ ಮಾಡುವ ಸೇವೆಯೇ ನನ್ನ ಜೀವನದ ದೊಡ್ಡ ತೃಪ್ತಿ. ಈ ವೃತ್ತಿ ಎಂದಿಗೂ ನನಗೆ ಬೇಸರವನ್ನುಂಟು ಮಾಡಲಿಲ್ಲ. ಸಮಾಜ ಸೇವೆಗೆ ದೇವರು ನೀಡಿದ ಅಮೂಲ್ಯ ಅವಕಾಶವೆಂದು ನಾನು ಈ ವೃತ್ತಿಯನ್ನು ಕಂಡಿದ್ದೇನೆ. ವೈದ್ಯರು ಹಣ ಸಂಪಾದನೆಯನ್ನಷ್ಟೇ ಗುರಿಯಾಗಿಸದೆ ಮಾನವೀಯತೆ, ಕರುಣೆ ಮತ್ತು ಸೇವಾಭಾವದಿಂದ ಕಾರ್ಯನಿರ್ವಹಿಸಬೇಕು" ಎಂದು ಹೇಳಿದರು.

## ಪ್ರಜಾಪ್ರಭುತ್ವದ ಮೌಲ್ಯ ಉಳಿಸಿದ ಸಹಕಾರ ಸಂಘ: ಶಾಸಕ ಸಿಮೆಂಟ್ ಮಂಜು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಪರಸ್ಪರ ಮಾಡಿಕೊಂಡಿದ್ದ ಒಪ್ಪಂದದಂತೆ ಅಧಿಕಾರ ಹಸ್ತಾಂತರ ಮಾಡುವ ಮೂಲಕ ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿದಿದೆ ಎಂದು ಶಾಸಕ ಸಿಮೆಂಟ್ ಮಂಜು ತಿಳಿಸಿದರು.

ತಾಲೂಕಿನ ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಬಿಜೆಪಿ ಯುವ ಮೋರ್ಚಾ ತಾಲೂಕು ಅಧ್ಯಕ್ಷ ನಿಖಿಲ್ ಮೋಹನ್ ಅಧಿಕಾರ ಸ್ವೀಕರಿಸಿದ ಸಂದರ್ಭದಲ್ಲಿ ಮಾತನಾಡಿದ ಅವರು, ಅಧ್ಯಕ್ಷ ಸ್ಥಾನಕ್ಕೆ ಸಂಬಂಧಿಸಿದಂತೆ ಈ ಹಿಂದೆ ಮಾಡಿಕೊಂಡಿದ್ದ ಒಪ್ಪಂದವನ್ನು ಗೌರವಿಸಿ ಮಾಜಿ ಅಧ್ಯಕ್ಷ ಬಿರಡಹಳ್ಳಿ ಮಧು ಅವರು ಮಾತಿನಂತೆ ಅಧಿಕಾರ ಹಸ್ತಾಂತರಿಸಿರುವುದು ಅನುಕರಣೀಯ ನಡೆ ಎಂದು ಶ್ಲಾಘಿಸಿದರು. ರಾಜಕೀಯದಲ್ಲಿ ಮಾತಿಗೆ ಬದ್ಧತೆ, ಪರಸ್ಪರ ವಿಶ್ವಾಸ ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಉಳಿಸಿಕೊಳ್ಳುವುದು ಅತ್ಯಂತ ಮುಖ್ಯ. ಅದೇ ಪರಂಪರೆಯನ್ನು ಈ ಸಹಕಾರ ಸಂಘ ಮುಂದುವರಿಸಿರುವುದು ಎಲ್ಲರಿಗೂ ಹೆಮ್ಮೆಯ ಸಂಗತಿ ಎಂದರು.

ನೂತನ ಅಧ್ಯಕ್ಷ ನಿಖಿಲ್ ಮೋಹನ್ ಅವರು ಮಾತನಾಡಿ, ಬಡವರು ಹಾಗೂ ಸಂಘದ ಎಲ್ಲ ಸದಸ್ಯರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಕಾರ್ಯನಿರ್ವಹಿಸಬೇಕು. ಸಹಕಾರ ಸಂಘವನ್ನು ಇನ್ನಷ್ಟು ಅಭಿವೃದ್ಧಿಯತ್ತ ಕೊಂಡೊಯ್ದು ಸದಸ್ಯರ ವಿಶ್ವಾಸಕ್ಕೆ ತಕ್ಕಂತೆ ಸೇವೆ ಸಲ್ಲಿಸಬೇಕು ಎಂದು ಶುಭ ಹಾರೈಸಿದರು. ನೂತನ ಅಧ್ಯಕ್ಷ ನಿಖಿಲ್ ಮೋಹನ್ ಮಾತನಾಡಿ, ಸಂಘದ ಎಲ್ಲ ಸದಸ್ಯರ ಸಹಕಾರದೊಂದಿಗೆ ಪಾರದರ್ಶಕ ಆಡಳಿತ ನೀಡುವುದರ ಜೊತೆಗೆ ರೈತರು ಹಾಗೂ ಸದಸ್ಯರ ಹಿತವನ್ನು ಕಾಪಾಡುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ ಎಂದು ಹೇಳಿದರು. ಈ ಹಿಂದಿನ ಅಧ್ಯಕ್ಷ ಬಿರಡಹಳ್ಳಿ ಮಧು ಅವರು ಆಂತರಿಕ ಒಪ್ಪಂದದಂತೆ ರಾಜೀನಾಮೆ ನೀಡಿದ್ದ ಹಿನ್ನೆಲೆಯಲ್ಲಿ ಬುಧವಾರ ನಡೆದ ಚುನಾವಣೆಯಲ್ಲಿ ನಿಖಿಲ್ ಮೋಹನ್ ಅಧ್ಯಕ್ಷ ಸ್ಥಾನಕ್ಕೆ ಏಕೈಕ ನಾಮಪತ್ರ ಸಲ್ಲಿಸಿ ಅವಿರೋಧವಾಗಿ ಆಯ್ಕೆಯಾದರು.

## ಜಿಲ್ಲೆಯಲ್ಲಿ ಶೇ.32 ಮಳೆ ಕೊರತೆ : ಕುಡಿಯುವ ನೀರಿನ ಪೂರೈಕೆ ಮೊದಲ ಆದ್ಯತೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಜಿಲ್ಲೆಯಲ್ಲಿ ಮುಂಗಾರು ಮಳೆ ತೀವ್ರವಾಗಿ ಕೈಕೊಟ್ಟಿರುವ ಹಿನ್ನೆಲೆಯಲ್ಲಿ ಜನರು ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿನ ಕೊರತೆ ಎದುರಾಗದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಜಿಲ್ಲಾಡಳಿತ ನಿರಂತರ ನಿಗಾ ವಹಿಸಬೇಕು ಎಂದು ಸಂಸದ ಶ್ರೇಯಸ್ ಎಂ. ಪಟೇಲ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.




ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಗುರುವಾರ ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿನ ಮಳೆ ಪರಿಸ್ಥಿತಿ, ಜಲಾಶಯಗಳ ನೀರಿನ ಮಟ್ಟ, ಕುಡಿಯುವ ನೀರಿನ ಲಭ್ಯತೆ, ಕೃಷಿ ಚಟುವಟಿಕೆಗಳು ಹಾಗೂ ಬರ ಪರಿಸ್ಥಿತಿಯ ಕುರಿತು ಅಧಿಕಾರಿಗಳೊಂದಿಗೆ ಸುದೀರ್ಘ ಚರ್ಚೆ ನಡೆಸಿದರು. ಈ ಬಾರಿ ಮುಂಗಾರು ಆರಂಭವಾದರೂ ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗಿಲ್ಲ. ಜಿಲ್ಲೆಯಲ್ಲಿ ಒಟ್ಟಾರೆ ಶೇ.32ರಷ್ಟು ಮಳೆ ಕೊರತೆಯಾಗಿದ್ದು, ವಿಶೇಷವಾಗಿ ಜೂನ್ ತಿಂಗಳಲ್ಲಿ ತೀವ್ರ ಮಳೆ ಅಭಾವ ಕಂಡುಬಂದಿದೆ. ಇದರ ಪರಿಣಾಮ ರೈತರು ಬಿತ್ತನೆ ಕಾರ್ಯ ಆರಂಭಿಸಲು ಸಾಧ್ಯವಾಗದೆ ಕೃಷಿ ಚಟುವಟಿಕೆಗಳು ಹಿನ್ನಡೆಯಾಗಿವೆ. ಮಳೆಗಾಗಿ ಕಾಯುತ್ತಿರುವ ರೈತರು ಆತಂಕದಲ್ಲಿದ್ದು, ಮುಂದಿನ ಕೆಲ ದಿನಗಳ ಮಳೆಯೇ ಕೃಷಿಯ ಭವಿಷ್ಯವನ್ನು ನಿರ್ಧರಿಸಲಿದೆ ಎಂದು ಅಧಿಕಾರಿಗಳು ಸಭೆಯಲ್ಲಿ ಮಾಹಿತಿ ನೀಡಿದರು.

ಜಿಲ್ಲೆಯ ಪ್ರಮುಖ ಕುಡಿಯುವ ನೀರಿನ ಮೂಲವಾದ ಹೇಮಾವತಿ ಜಲಾಶಯದಲ್ಲಿ ಪ್ರಸ್ತುತ ಕೇವಲ 10 ಟಿಎಂಸಿ ನೀರು ಮಾತ್ರ ಬಳಕೆಗೆ ಲಭ್ಯವಿದೆ. ಇದೇ ಜಲಾಶಯದಿಂದ ಹಾಸನ, ಅರಕಲಗೂಡು, ಹೊಳೆನರಸೀಪುರ ಹಾಗೂ ಆಲೂರು ತಾಲ್ಲೂಕುಗಳಿಗೆ ಕುಡಿಯುವ ನೀರು ಪೂರೈಕೆಯಾಗುತ್ತಿದೆ. ಈ ನಾಲ್ಕು ತಾಲ್ಲೂಕುಗಳ ಕುಡಿಯುವ ನೀರಿನ ಅಗತ್ಯಕ್ಕಾಗಿ ಪ್ರತಿ ತಿಂಗಳು ಸುಮಾರು 2 ರಿಂದ 2.5 ಟಿಎಂಸಿ ನೀರು ಬೇಕಾಗುತ್ತದೆ. ಪ್ರಸ್ತುತ ಇರುವ ನೀರಿನ ಪ್ರಮಾಣವನ್ನು ಲೆಕ್ಕ ಹಾಕಿದರೆ ಇನ್ನೂ ಸುಮಾರು ಮೂರು ತಿಂಗಳ ಅವಶ್ಯಕತೆಯನ್ನು ಮಾತ್ರ ಪೂರೈಸುವಷ್ಟು ಸಂಗ್ರಹವಿದೆ ಎಂದು ಅಧಿಕಾರಿಗಳು ವಿವರಿಸಿದರು. ಮಳೆ ಕೊರತೆಯಿಂದ ಈಗಾಗಲೇ ಜಿಲ್ಲೆಯ 35 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿದ್ದು, ಅಲ್ಲಿನ ನಿವಾಸಿಗಳಿಗೆ ಖಾಸಗಿ ಕೊಳವೆಬಾವಿಗಳನ್ನು ಬಾಡಿಗೆ ಪಡೆದು ನೀರು ಪೂರೈಸಲಾಗುತ್ತಿದೆ. ಅಗತ್ಯವಿದ್ದರೆ ಇನ್ನಷ್ಟು ಗ್ರಾಮಗಳಿಗೆ ಇದೇ ಮಾದರಿಯಲ್ಲಿ ನೀರು ಒದಗಿಸಲು ಸಿದ್ಧತೆ ನಡೆಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸಂಸದರು ಸೂಚಿಸಿದರು. ಕುಡಿಯುವ ನೀರಿನ ಸಮಸ್ಯೆ ಯಾವುದೇ ಕಾರಣಕ್ಕೂ ಜನರಿಗೆ ಅಥವಾ ಜಾನುವಾರುಗಳಿಗೆ ಉಂಟಾಗದಂತೆ ಎಲ್ಲಾ ತಹಶೀಲ್ದಾರರು ತಮ್ಮ ವ್ಯಾಪ್ತಿಯ ಗ್ರಾಮಗಳ ಮೇಲೆ ನಿರಂತರ ನಿಗಾ ವಹಿಸಬೇಕು. ನೀರಿನ ಮೂಲಗಳು, ಕೆರೆಗಳು, ಕೊಳವೆಬಾವಿಗಳು ಹಾಗೂ ಪೈಪ್‌ಲೈನ್ ವ್ಯವಸ್ಥೆಯ ಕುರಿತು ಪ್ರತಿದಿನ ಮಾಹಿತಿ ಸಂಗ್ರಹಿಸಿ, ಸಮಸ್ಯೆ ಕಂಡುಬಂದ ಕೂಡಲೇ ಪರಿಹಾರ ಕ್ರಮ ಕೈಗೊಳ್ಳಬೇಕು ಎಂದು ಶ್ರೇಯಸ್ ಪಟೇಲ್ ನಿರ್ದೇಶನ ನೀಡಿದರು.

ಹವಾಮಾನ ಇಲಾಖೆ ಮುನ್ಸೂಚನೆಯ ಪ್ರಕಾರ ಜುಲೈ ತಿಂಗಳಲ್ಲಿ ಉತ್ತಮ ಮಳೆಯಾಗುವ ನಿರೀಕ್ಷೆಯಿದೆ. ನಿರೀಕ್ಷೆಯಂತೆ ಮಳೆಯಾದರೆ ಕೃಷಿ ಚಟುವಟಿಕೆಗಳಿಗೆ ವೇಗ ಸಿಗಲಿದ್ದು, ಜಲಾಶಯಗಳಲ್ಲೂ ನೀರಿನ ಸಂಗ್ರಹ ಹೆಚ್ಚಾಗಿ ಕುಡಿಯುವ ನೀರಿನ ಸಮಸ್ಯೆ ಬಹುತೇಕ ನಿವಾರಣೆಯಾಗಲಿದೆ. ಆದರೆ ಮಳೆ ಬರುವವರೆಗೂ ಯಾವುದೇ ನಿರ್ಲಕ್ಷ್ಯ ವಹಿಸದೆ ಮುನ್ನೆಚ್ಚರಿಕೆ ಕ್ರಮಗಳನ್ನು ಮುಂದುವರಿಸಬೇಕು ಎಂದು ಅವರು ಹೇಳಿದರು.

## ಸಾರಿಗೆ ನೌಕರರ ವೇತನ ಹೆಚ್ಚಳ: ಸರ್ಕಾರ ಆದೇಶ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೆಂಗಳೂರು: ರಾಜ್ಯ ಸರ್ಕಾರ ಸಾರಿಗೆ ನೌಕರರಿಗೆ ಸಿಹಿ ಸುದ್ದಿ ನೀಡಿದ್ದು, ಕೊನೆಗೂ ವೇತನ ಹೆಚ್ಚಳ ಮಾಡಿ ಆದೇಶ ಹೊರಡಿಸಿದೆ.

ಈ ತಿಂಗಳಿನಿಂದ ಸಾರಿಗೆ ನೌಕರರ ಮೂಲ ವೇತನ ಹೆಚ್ಚಳವಾಗಲಿದೆ. ಸರ್ಕಾರವು ನಾಲ್ಕು ಸಾರಿಗೆ ನಿಗಮಗಳಾದ ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಎನ್‌ಡಬ್ಲ್ಯೂಕೆಆರ್‌ಟಿಸಿ, ಮತ್ತು ಕೆಕೆಆರ್‌ಟಿಸಿ ನೌಕರರ ಮೂಲ ವೇತನವನ್ನು ಶೇ.12.5ರಷ್ಟು ಹೆಚ್ಚಿಸಿದೆ.

ಜುಲೈ ತಿಂಗಳ ವೇತನದಲ್ಲಿ ಪರಿಷ್ಕೃತ ವೇತನ ಜಾರಿಗೆ ಬರುವಂತೆ ಪಾವತಿಸಲು ಸರ್ಕಾರ ಆದೇಶ ಹೊರಡಿಸಿದ್ದು, ಹೊಸ ವೇತನ ಪರಿಷ್ಕರಣೆಯು 2025ರ ಏಪ್ರಿಲ್ 1 ರಿಂದಲೇ ಪೂರ್ವಾನ್ವಯ ಆಗುವಂತೆ ಜಾರಿಗೆ ಬಂದಿದೆ. ಈಗಾಗಲೇ ನೌಕರರಿಗೆ ಪಾವತಿಸಬೇಕಿದ್ದ ಹಳೆಯ ವೇತನ ಹಿಂಬಾಕಿಯ ಮೊದಲ ಕಂತಿನ ಹಣವನ್ನು ಸರ್ಕಾರ ಬಿಡುಗಡೆ ಮಾಡಿದೆ.

ಈ ಹೆಚ್ಚಳದಿಂದಾಗಿ ರಾಜ್ಯದ ಸುಮಾರು 1.05 ಲಕ್ಷ ಸಾರಿಗೆ ನೌಕರರಿಗೆ ಅನುಕೂಲವಾಗಲಿದೆ. ಇದರಿಂದ ಸರ್ಕಾರಕ್ಕೆ ತಿಂಗಳಿಗೆ ಹೆಚ್ಚುವರಿಯಾಗಿ 72.80 ಕೋಟಿ ರೂ. ವೆಚ್ಚವಾಗಲಿದೆ.

## ಇತಿಹಾಸದಲ್ಲಿ ಈ ದಿನ

### ಜುಲೈ-03

1776: ಅಮೆರಿಕದ ಸ್ವಾತಂತ್ರ್ಯಕ್ಕೆ ಮುನ್ನುಡಿ ಬರೆದ ನಿರ್ಣಯವನ್ನು ರಿಚರ್ಡ್ ಹೆನ್ರಿ ಲೀ ಕಾಂಗ್ರೆಸ್‌ನಲ್ಲಿ ಮಂಡಿಸಿದರು.

1929: ಇಟಲಿಯ ಲ್ಯಾಟರನ್ ಒಪ್ಪಂದ ಜಾರಿಗೆ ಬಂದು ವ್ಯಾಟಿಕನ್ ನಗರ ಸ್ವತಂತ್ರ ರಾಷ್ಟ್ರವಾಗಿ ಅಧಿಕೃತ ಮಾನ್ಯತೆ ಪಡೆಯಿತು.

1942: ದ್ವಿತೀಯ ಮಹಾಯುದ್ಧದ ನಿರ್ಣಾಯಕ ಘಟ್ಟವಾದ ಮಿಡ್‌ವೇ ಯುದ್ಧ ಅಮೆರಿಕದ ವಿಜಯದೊಂದಿಗೆ ಅಂತ್ಯಗೊಂಡಿತು.

1975: ವಿಶ್ವದ ಮೊದಲ ಕ್ರಿಕೆಟ್ ವಿಶ್ವಕಪ್ ಪಂದ್ಯಾವಳಿ ಇಂಗ್ಲೆಂಡ್‌ನಲ್ಲಿ ಆರಂಭವಾಯಿತು.

1981: ಇಸ್ರೇಲ್ ಇರಾಕ್‌ನ ಓಸಿರಾಕ್ ಅಣು ಸ್ಥಾವರದ ಮೇಲೆ ವೈಮಾನಿಕ ದಾಳಿ ನಡೆಸಿತು.

**ಜನನ**

1952: ಲಿಯಾಮ್ ನೀಸನ್, ಖ್ಯಾತ ಹಾಲಿವುಡ್ ನಟ

1958: ಪ್ರಿನ್ಸ್ ರೋಜರ್ಸ್ ನೆಲ್ಸನ್, ವಿಶ್ವಪ್ರಸಿದ್ಧ ಗಾಯಕ, ಗೀತರಚನೆಕಾರ ಮತ್ತು ಸಂಗೀತಗಾರ

1975: ಅಲೆನ್ ಐವರ್ಸನ್, ಅಮೆರಿಕದ ಪ್ರಸಿದ್ಧ ಬ್ಯಾಸ್ಕೆಟ್‌ಬಾಲ್ ಆಟಗಾರ

**ನಿಧನ**

1954: ಅಲನ್ ಟ್ಯೂರಿಂಗ್, ಆಧುನಿಕ ಕಂಪ್ಯೂಟರ್ ವಿಜ್ಞಾನದ ಪಿತಾಮಹರಲ್ಲಿ ಒಬ್ಬರು

2015: ಕ್ರಿಸ್ಟೋಫರ್ ಲೀ, ಖ್ಯಾತ ಬ್ರಿಟಿಷ್ ಚಲನಚಿತ್ರ ನಟ

## ಎನ್ನ ಭಂಜಿ!!-3

**ಧನಂಜಯ ಜೀವಾಳ ಬಿ.ಕೆ.**

**ಗ್ರಾಮಾಯಣ-8**



ಆಗ ಇದ್ದಕ್ಕಿದ್ದಂತೆ ಕೇಪಿನ ಕೋವಿ ಹಿಡಿದು ಗುಟ್ಟುನಕ್ಕಿ ಶಿಕಾರಿಗೆ ಹೊರಟಿದ್ದ ಮೊಗಣ್ಣ ಪ್ರತ್ಯಕ್ಷನಾಗಬೇಕೇ? 'ಯಾವನ್ರಲ್ಲಾ ಅವನು ನಮ್ಮೂರೊಳಗೆ ಬಂದಿರಾದು. ಸರ್ಕಾರಿ ಸೂಳೇಮಕ್ಳು ಊರೊಳಗೆ ಬರಕೂಡದೆಂದು ಊರಬಾಗಿಲಲ್ಲೇ ಬೋರ್ಡ್ ಹಾಕಿಲ್ವಾ ನಾವು ರೈತ ಸಂಘದವರು' ಎಂದವನೇ ಸಿವಿಲ್ ಡ್ರೆಸ್‌ನಲ್ಲಿದ್ದ ಎಕ್ಸೈಸಿನವನೊಬ್ಬನನ್ನು ಎದೆಹಿಡಿದು ದೂಕಿ ಬೀಳಿಸಿದ. ಯಾರಿಗೂ ಹೊಡೆಯಲು ಅವಕಾಶ ಸಿಗದೇ ಹಪಹಪಿಸಿ ಬೇಸತ್ತಿದ್ದ ಅನೇಕ ಸ್ಕ್ವಾಡ್ ಹುಡುಗರು ಸಿಕ್ಕಿದ್ದೇ ಛಾನ್ಸ್ ಎಂದುಕೊಂಡು 'ಹಾಕ್ಕು ಆ ನನ್‌ಮಗ್ನಿಗೆ' ಎಂದವರೇ, ಮೊಗಣ್ಣನ ಮೇಲೆ ಹಾರಿದರು. ಇದೇ ಸಮಯ ಕಾಯುತ್ತಿದ್ದ ಡೀಸೀ ಸುಬ್ಬ ಸಾರಾಯಿ ಬೇಯುತ್ತಿದ್ದ ಕಡುಬಿನ ಕಳಸಿಗೆಯನ್ನು ಒಲೆಯಿಂದ ಕೆಡವಿ ಉರುಳಿಸಿ ಈಚಲುಹರಕ್ಕೆ ಹಾರಿ ಮಾಯವಾದ. ಸಂಜೀವ ತಾನೊಂದು ಬಡಿಗೆ ಹಿಡಿದು ಮೊಗಣ್ಣನನ್ನು ಬಿಡಿಸಲು ಗುಂಪಿನ ಮೇಲೆ ನೆಗೆದ. ಜಬ್ಬ ಸಿಕ್ಕಿದಷ್ಟು ಸಿಕ್ಕಲಿ ಎಂದು ಕ್ಯಾನ್ ಎತ್ತಿಕೊಂಡು ನೀರ್‌ಕಾಸ್ಳೊಳ ದಬ್ಬಲಿನೊಳಗೆ ಅಂತರ್ಧಾನನಾದ. ಈ ಗಲಾಟೆಯಲ್ಲಿ ಭಾರೀ ಪೆಟ್ಟು ತಿನ್ನಬೇಕಾಗುತ್ತದೆ ಎಂದರಿತ ಜಾರಪ್ಪನ ಹೆಂಗಸು ಸೀದಾ ಓಡಿದವಳೇ ಜೀಪಿನೊಳಗೆ ಈಗಾಗಲೇ ವಿರಾಜಮಾನನಾಗಿದ್ದ ಗಂಡನ ಪಕ್ಕ ಪ್ರತಿಷ್ಠಾಪನೆಗೊಂಡಳು. ಊರಿಗೆ ಹೊಸಬನಾಗಿದ್ದ ಬಸವರಾಜ ಮಾತ್ರ ಆತ್ಮರಕ್ಷಣೆಗೆಂಬಂತೆ ಕ್ಷಮೆಗಾಗಿ ಬೆಲ್ಲದ್‌ನಾಯಕನ ಕಾಲುಗಳನ್ನೇ ತಬ್ಬಿಕೊಂಡ. ತನ್ನನ್ನು ಬೀಳಿಸಿ ಹೊಡೆಯಲು ಈ ರೀತಿ ಕಾಲು ಹಿಡಿದಿದ್ದಾನೆಂದು ತಿಳಿದ ಎಸ್.ಐ. ಪಣಂಗನೆ ಹಾರಿ ಬಸವರಾಜನ ಹಲ್ಲುಗಳು ಉದುರುವಂತೆ ಮುಸುಡಿಗೇ ಬೂಟುಗಾಲಿನಿಂದ ಒದ್ದ. ಇತ್ತ ಸಂಜೀವ, ಮೊಗಣ್ಣ ಸೇರಿ ನಾಲ್ಕಾರು ಜನರ ತಲೆಗಳನ್ನು ತಮ್ಮ ಕೈಲಿದ್ದ ಬಡಿಗೆಯಿಂದಲೇ ಬಿಚ್ಚಿಹಾಕಿದ್ದರು. ನಾಲ್ಕು ಜೀಪಿನ ಖಾಕಿದಾರಿಗಳ ಮುಂದೆ ಅವರ ಆಟ ಸಾಗದೇ ಬೀಜ ನೀರಾಗುವಂತೆ ಒದೆತಿಂದರು. ಸುಲಭಕ್ಕೆ ಗುರುತು ಸಿಗಲಾರದಂತೆ ಮುಖ ಮೈ ಊದಿಸಿಕೊಂಡು ಸುಮಾರು ಆರು ತಿಂಗಳು ಜೈಲಿನಲ್ಲಿದ್ದು ಜಾರಪ್ಪ ದಂಪತಿಗಳಿಗೆ ಕಂಪನಿ ನೀಡಿದರು. ನಿಜ ಸಂಗತಿ ಹೇಳಿ ವಾರದ ನಂತರ ಮನೆಗೆ ಬಂದ ಬಸ್ರಾಜ ಮಾತ್ರ ಪೋಲೀಸ್ ದಾಖಲೆಯಲ್ಲಿ ನೋಟೆಡ್ ಪರ್ಸನ್ ಆಗಿಹೋದ.

ಒಂದು ವಾರ ಪೋಲೀಸ್ ಆತಿಥ್ಯದಲ್ಲಿದ್ದ ಬಸ್ರಾಜ ವಾಪಾಸ್ ಲೈನಿಗೆ ಬರುವುದರಲ್ಲಿ ಈ ಹಲಾಲುಕೋರ ಗೋಪಾಲ ಪಾರಿಯ ಜೊತೆ ಲೈನ್‌ಕ್ಲಿಯರ್ ಮಾಡಿಕೊಂಡಿದ್ದ. ಅಪ್ಪನ ಆಟವನ್ನು ನೋಡಿ ತನ್ನದೇ ಲೆಕ್ಕಾಚಾರ ಹಾಕಿದ ಮಗ ರಾಘವೇಂದ್ರ ಪಾರಿಯ ಎರಡನೇ ಮಗಳನ್ನು ಹಿಂಬಾಲಿಸತೊಡಗಿದ. ಪಾರಿಯ ಹಿರಿಯ ಮಗಳಿಗೆ ಈಗಾಗಲೇ ಮದುವೆ ನಿಶ್ಚಯವಾಗಿತ್ತು. ನಿಶ್ಚಯವಾಗಿದ್ದ ವರ ಸಿದ್ದೇಶ ದಾವಣಗೆರೆಯಿಂದ ಬಸ್ರಾಜನ ಕುಟುಂಬ ಬಂದಿದ್ದ ಅದೇ ಲಾರಿಯಲ್ಲಿ ಮೂಡಿಗೆರೆಗೆ ಬಂದು, ಬೀಜುವಳ್ಳಿಯ ಜೂಜಿ ಪರ್ಬುಗಳ ತೋಟದಲ್ಲಿ ಕೆಲಸ ಮಾಡಿಕೊಂಡಿದ್ದ. ಯಾರೋ ಅವನಿಗೆ ಈ ಸುದ್ದಿ ಮುಟ್ಟಿಸಿ ಹಿರಿಯ ಮಗಳಿಗೇ ರಾಘವೇಂದ್ರ ಗಾಳ ಹಾಕುತ್ತಿದ್ದಾನೆಂದು ತಿಳಿಸಿದರು. ಇದನ್ನು ನಿಜವೆಂದೇ ತಿಳಿದ ಸಿದ್ದೇಶ ನಾಳೆ ನಾಡಿದ್ದರಲ್ಲಿ ತೋಟದ ಕೆಲಸದ ಲೆಕ್ಕಾಚಾರ ಮುಗಿಸಿ ಊರಿಗೆ ವಾಪಾಸ್ ಹೊರಡುವುದರಲ್ಲಿದ್ದವನು, ತನ್ನದೇ ಗುಂಪಿನ ಗೆಳೆಯರನ್ನು ಸೇರಿಸಿಕೊಂಡು ರಾಘವೇಂದ್ರನಿಗೆ ಸರಿಯಾಗಿ ಚುರುಕು ಮುಟ್ಟಿಸಲು ಕಾಯುತ್ತಿದ್ದ. ಶುಕ್ರವಾರದ ಸಂತೆ ಮುಗಿಸಿ ಗೋಪಾಲ ಹಾಗೂ ಅವನ ಮಗ ರಾಘವೇಂದ್ರ ಎಯ್ಡು ಬೈಕನ್ನೇರಿ ಮನೆಗೆ ವಾಪಾಸ್ ಬರುವಾಗ ಕೆಡವಿಹಾಕಿದರು. ರಸ್ತೆಗೆ ಅಡ್ಡಲಾಗಿ ಟೆಲಿಫೋನ್ ತಂತಿಯನ್ನು ಬಿಗಿದು ಬೀಳಿಸಿ ಗೋಪಾಲನಿಗೆ ಅವನ ಅಪ್ಪನ ಹೆಸರು ಹಾಗೂ ರಾಘವೇಂದ್ರನಿಗೆ ಗೋಪಾಲನ ಹೆಸರು ಮರೆತೇಹೋಗುವಂತೆ ಹೊಡ್ತಾ ಅಂದ್ರೆ ಹೊಡ್ತಾ ಹೊಡೆದು ಕೊಟ್‌ಕೆಡವಿದರು. ನೀರು ಕೇಳುತ್ತಿದ್ದವರನ್ನು ಕಾಲ್ಕಟ್ಟಿದ ಹಂದಿಯನ್ನು ಎಸೆಯುವಂತೆ ಈಚಲ ಗುತ್ತಿಯ ಮೇಲೆ ಬಿಸಾಡಿ ರಾತ್ರೋ ರಾತ್ರಿ ಧರ್ಮಸ್ಥಳದಿಂದ ಶಿವಮೊಗ್ಗಕ್ಕೆ ಹೋಗುವ ಬಸ್ ಹತ್ತಿ ಊರುಬಿಟ್ಟರು.

ಕುಂಟುತ್ತಾ ಮುಲುಗುತ್ತಾ ಮನೆಸೇರಿದ ಗೋಪಾಲನಿಗೆ ಬಸ್ರಾಜನ ಮೇಲೇ ಅನುಮಾನ ಶುರುವಾಗಬೇಕೇ? ನಾಲ್ಕು ದಿನ ಮೂಡಿಗೆರೆಯ ಸರ್ಕಾರಿ ಆಸ್ಪತ್ರೆಯಲ್ಲಿ ಟ್ರೀಟ್‌ಮೆಂಟ್ ಪಡೆದ ಗೋಪಾಲ ಮತ್ತವನ ಮಗ ತಮ್ಮನ್ನು ನೋಡಲು ಆಸ್ಪತ್ರೆಗೆ ಬಂದವರೆಲ್ಲರೆದುರಿಗೆ ಹಲ್ಲು ಬಿಗಿದು ಮುಷ್ಟಿ ಹಿಡಿದು ''ಆ ನನ್ಮಕ್ಕಳು ಹಗಲಲ್ಲಿ ಸಿಗಬೇಕಿತ್ತು, ಬೋಟಿ ನಿಖಾಲಿ ಮಾಡುತ್ತಿದ್ದೆ. ಹಲಾಲ್‌ಕೋರರು ರಸ್ತೆಗೆ ಅಡ್ಡ ತಂತಿ ಕಟ್ಟಿ ಬೀಳಿಸಿ, ಕಣ್ಣಿಗೆ ಖಾರ ಪುಡಿ ಬೇರೆ ಹಾಕಿದ್ರಲ್ಲಾ, ಅದಿಕ್ಕೇ ತಿರುಗಿ ಬಾರಿಸಲಿಕ್ಕೇ ಸಾಧ್ಯ ಆಗ್ಲಿಲ್ಲ'' ಎಂದು ಸುಸ್ತಾಗುವವರೆಗೆ ಅಪ್ಪ, ಸುಸ್ತಾದ ನಂತರ ಮಗ ಅದೇ ಟೇಪನ್ನು ತಿರುತಿರುಗಿಸಿ ಹಾಕುತ್ತಿದ್ದರು. ಇದರ ನಡುವೆ ತಮ್ಮಗಳ ಎಕ್ಸ್‌ಟ್ರಾ ಕರಿಕ್ಯುಲರ್ ಆಕ್ಟಿವಿಟಿ ಬಗ್ಗೆ ಅಪ್ಪಿತಪ್ಪಿಯೂ ಪ್ರಸ್ತಾಪ ಮಾಡುತ್ತಿರಲಿಲ್ಲ.

ಡಿಸ್ಚಾರ್ಜ್ ಆಗಿ ಮನೆಗೆ ಬಂದವರಿಗಿನ್ನೂ ಬಾತುಕೊಂಡು ಊದಿದ್ದ ಮೂತಿ, ಹರಿದಿದ್ದ ಕಿವಿ ಸುಸ್ಥಿತಿಗೆ ಬಂದಿರಲಿಲ್ಲ. ಬಂದ ಕೂಡಲೇ ಮಾಡಿದ ಮೊದಲ ಕೆಲಸವೆಂದರೆ ಕಣದಲ್ಲಿ ಹರಡಿದ್ದ ಕಾಫಿಬೀಜವನ್ನು ಬಸ್ರಾಜನ ಕೈಯಲ್ಲಿ ಗುಡ್ಡೆ ಮಾಡಿಸಿ, ಇನ್ನಿಬ್ಬರು ಕೆಲಸಗಾರರ ಸಹಾಯದಿಂದ ಚೀಲಗಳಿಗೆ ತುಂಬಿಸಿ ಇಡಿಸಿದ್ದು. ಆ ವರ್ಷ ಸಾಕಷ್ಟು ಬೆಳೆಯೂ ಬಂದಿದ್ದರಿಂದ ಅರ್ಧ ಕಣದ ಕಾಫಿ ತುಂಬುವುದರೊಳಗೆ ಸಾಕುಸಾಕಾಗಿ ಸಾಯಂಕಾಲವಾಯ್ತು. ಯಾರಿಗೂ ಬೇಡದಿದ್ದ ಕಾಲದಲ್ಲಿ ಊರಿನ ಖಾಲಿ ಜಾಗಕ್ಕೆಲ್ಲಾ ತನ್ನಪ್ಪನ ಮನೆಯ ಆಸ್ತಿಯೆಂದೆಣಿಸಿ ಬೇಲಿ ಹಾಕಿಸಿ, ಕಾಡನ್ನೆಲ್ಲಾ ತೋಟ ಮಾಡಿಕೊಂಡು ದಬಾಯಿಸಿಕೊಂಡಿದ್ದ ಗೋಪಾಲ ಇತ್ತೀಚೆಗೆ ಊರಿನಲ್ಲಿದ್ದ ಭೂರಹಿತರಿಗೆ ಸರ್ಕಾರ ಮಂಜೂರು ಮಾಡಿದ್ದ ಭೂಮಿಯನ್ನು ಆರು ಕಾಸು, ಮೂರು ಕಾಸು ನೀಡಿ ಬೇನಾಮಿ ಪತ್ರ ಮಾಡಿಸಿಕೊಂಡು ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡಿದ್ದ.

ಸರ್ಕಾರದ ಸವಲತ್ತುಗಳನ್ನು ಬಳಸಿಕೊಂಡು ಅಲ್ಪಸ್ವಲ್ಪ ವಿದ್ಯೆ ಪಡೆದಿದ್ದ ಯುವಕರು ತಮ್ಮತಮ್ಮ ಜಮೀನನ್ನು ವಾಪಾಸ್ ಪಡೆಯಲು ತಹಶೀಲ್ದಾರರಿಗೆ ಅರ್ಜಿ ಗುಜರಾಯಿಸಿ ಪುನರ್‌ಸ್ವಾಧೀನಕ್ಕೆ ಕಾಯುತ್ತಿದ್ದರು. ಅವರಪ್ಪಂದಿರು ಮುಕುಳಿ ಬಗ್ಗಿಸಿ ದುಡಿಯಲಾರದೆ, ಪುಗಸಟ್ಟೆ ಸಿಕ್ಕಿದ್ದ ಭೂಮಿಯಲ್ಲಿ ಕೃಷಿ ಮಾಡಲಾಗದೇ ಹೆಂಡ ಕುಡಿದು, ತುಂಡು ತಿಂದು, ಭಂಗಿ ಸೇದುವ ಆಸೆಯಿಂದ ಸರ್ಕಾರ ಮಂಜೂರು ಮಾಡಿದ ಜಮೀನನ್ನು ಮಾರಿ, ಸಿಕ್ಕ ದುಡ್ಡು ಮುಗಿಸಿಕೊಂಡ ನಂತರ ಕೊಂಡವರ ಬುಡಕ್ಕೇ ನೀರು ತಿರುವಲು ಮಕ್ಕಳನ್ನು ಛೂ ಬಿಟ್ಟಿದ್ದರು. ಗೋಪಾಲನಂತೆ ಬಡವರ ಭೂಮಿಯನ್ನು ಸಿಕ್ಕಿದ್ದೇ ಛಾನ್ಸ್ ಎಂದುಕೊಂಡು ಸಾಗುವಳಿ ಶುರುಮಾಡಿದ್ದವರೀಗ ಭೂಮಿ ಹಿಂದಿರುಗಿಸುವುದನ್ನು ತಪ್ಪಿಸಿಕೊಳ್ಳಲು ವಾರಕ್ಕೊಮ್ಮೆ ನೂರು ಇನ್ನೂರನ್ನು ಹಫ್ತಾ ಎಂಬಂತೆ ನೀಡಿ ಮನಸ್ಸಿನಲ್ಲೇ ಅಕಟಕಟಾ ಎಂದು ಶಪಿಸುತ್ತಿದ್ದರು. ವರ್ಷಾನುಗಟ್ಟಲೆ ಯಾವುದೇ ಕೃಷಿ ಮಾಡದೇ ಕಡೆಗೆ ಮುಳ್ಳು ಬೇಲಿಯನ್ನೂ ಸಹ ಹಾಕದೆ ಈಚಲ ಹರ, ಸೀಮೆಸೀಗೆ ಲಂಟಾನಾ, ಕೆಂಜಿಗೆ ದಬ್ಬಲನ್ನು ಬೆಳೆಯಲು ಹಾಗೆಯೇ ಬಿಟ್ಟು ನನಗೂ ಅದಕ್ಕೂ ಸಂಬಂಧವೇ ಇಲ್ಲ ಎಂಬಂತೆ ಮೋರಿ ಮೇಲೆ ಕೂತು ಬೀಡಿ ಸೇದುತ್ತಾ, ಬಿಸಿಲು ಕಾಯಿಸುತ್ತಾ ಕಾಲಹರಣ ಮಾಡುತ್ತಿದ್ದರು. ಚೌಡಿ, ಜಟಿಗ, ಮಾರಿ ಹಬ್ಬಗಳನ್ನು ಉಂಡುಕೊಂಡು ನಾಳೆ ಕೆಲಸಕ್ಕೆ ಬರ್ತೀನಿ ಎಂದೋ, ಜನರನ್ನು ಕೆಲಸಕ್ಕೆ ಕಳಿಸುತ್ತೇನೆ ಎಂದೋ ಬೂರಿ ಬಿಡುತ್ತಾ ತೋಟದ ಮಾಲೀಕರಿಂದ ನೂರು-ಇನ್ನೂರು ತೆಗೆದುಕೊಂಡು ಕಾಲಕಳೆಯುತ್ತಿದ್ದರು. ಮನೆಯ ದುಡಿಯುವ ಹೆಂಗಸರನ್ನು ಹೆದರಿಸಿ ಸಂತೆಯ ಹಿಂದಿನ ದಿನದ ವಾರದ ಸಂತೆಯ ಹಣ ಕಿತ್ತುಕೊಂಡು ಬಾಯಮ್ಮನಂಗಡಿಯ ಹಂದಿ ತುಂಡನ್ನೂ, ಜಾರಪ್ಪನ ಡಿಸ್ಟಿಲರಿಯ ಬಟ್ಟಿ ಸಾರಾಯಿಯನ್ನೂ ಹೊಟ್ಟೆಗಿಳಿಸಿ ''ಅಲ್ಕನ ಮಾರಾಯ ನಮ್ ಎಲ್ಲೆಮ್ಮೆ ಇದಾನಲ್ಲ'' ಎಂದು ಲಾಯ್‌ಲೋಟ್ ಶುರುಮಾಡುತ್ತಿದ್ದರು.

ಇಂತಿಪ್ಪ ಕಾಲದಲ್ಲಿ ಗೋಪಾಲನಿಂದ ಗುಮಾನಿಗೊಳಗಾಗಿದ್ದ ಬಸ್ರಾಜ ಕಾಫಿಬೀಜ ತುಂಬಿಸಿ ಸುಸ್ತಾಗಿ ಮನೆಗೆ ಹೋಗಿ, ಮುದ್ದೆ-ಚೊಗಟೇ ಸೊಪ್ಪಿನ ಸಾರನ್ನು ಉಂಡು ಆಲ್ ಇಂಡಿಯಾ ರೇಡಿಯೋವನ್ನು ಕೇಳುತ್ತಾ ವಿವಿಧ ಭಾರತಿಯಲ್ಲಿ ''ತೇರೆ ಮೇರೆ ಬೀಚುಮೇ?.........'' ಎಂಬ ಹಾಡನ್ನು ಹಾಕಿಕೊಂಡು ಲೈನ್ ಮನೆಯ ಮಾಡನ್ನು ಗಮನಿಸುತ್ತಾ ವಿಶ್ರಮಿತಿದ್ದ. ದನದ ಕೊಟ್ಟಿಗೆಯ ಗಂಜಳ, ಕಾಫಿ ಪಲ್ಪರ್ ಸಿಪ್ಪೆಯ ಕೊಳೆತ ರಸ ಹಾಗೂ ದಿನವಿಡೀ ದುಡಿದ ಮೈಯ ಬೆವರಿನಿಂದ ತೊಯ್ದಿದ್ದ ಬಟ್ಟೆಗಳ ಕಮಟು ವಾಸನೆಯ ವಿಚಿತ್ರವಾದ ಬ್ಲೆಂಡ್‌ನ್ನು ಲೈನಿನ ಹೊರಗೆ ಬೇಲಿ ಎಡೆಯಲ್ಲಿ ಆಗಸದೆತ್ತರಕ್ಕೆ ನಿಂತಿದ್ದ ನೀಲಗಿರಿ ಮರದ ಸುವಾಸನೆಯೊಂದಿಗೆ ಮಿಳಿಸುತ್ತಾ ಕಾಲ ಮೇಲೆ ಕಾಲು ಹಾಕಿಕೊಂಡು ಮಲಗಿದ್ದವನಿಗೆ ಕೆಲಸದ ಸುಸ್ತಿನಿಂದ ತಡೆಯಲಾರದಷ್ಟು ನಿದ್ರೆ ಆವರಿಸಿತ್ತು. ಇದ್ದಕ್ಕಿದ್ದಂತೆ ಎಚ್ಚರವಾದವನಿಗೆ ತನ್ನ ಲೈನಿನ ಬಾಗಿಲಿನಲ್ಲಿ ಕರಿಬೂಟಿನ ಖಾಕಿದಾರಿಗಳು ''ಹೊರಗೆ ಬಾರೋ ಸುವ್ವರ್'' ಎಂದು ಅಬ್ಬರಿಸುತ್ತಿದ್ದುದು ಕೇಳಿಸಿತು. ''ಬೋಳಿಮಗನೇ ಕೆಲಸ ಕೊಟ್ಟ ಸಾವ್ಕಾರನ ಮನೆಯ ಕಾಫಿನೇ ಕದೀತೀಯಾ?'' ಎಂದು ಕುತ್ತಿಗೆ ಹಿಡಿದು ಜೀಪಿನೊಳಗೆ ದಬ್ಬಿಸಿಕೊಂಡ. ಗೋಪಾಲ ತನ್ನ ಮಗನ ಸಹಾಯದಿಂದ ಕಾಫಿ ಮೂಟೆಯೊಂದನ್ನು ತಂದು ಬಸ್ರಾಜ ವಾಸವಾಗಿದ್ದ ಲೈನಿನ ಹಿಂಬದಿಯಲ್ಲಿಟ್ಟು ಪೋಲೀಸರಿಗೆ ಫೋನಾಯಿಸಿದ. ಬಸ್ರಾಜನನ್ನು ವಿನಾ ಕಾರಣ ಕಳ್ಳನನ್ನಾಗಿಸಿ ನಾಲ್ಕು ದಿನ ಲಾಕಪ್‌ನಲ್ಲಿರಿಸಿ ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿಸಿದಂತೆ ಹೊಟ್ಟೆಪಾಡಿಗೆ ಊರಿಂದೂರಿಗೆ ಬಂದಿದ್ದ ಅಮಾಯಕನನ್ನು ಮಟ್ಟಹಾಕಲು ಏನು ಅಗತ್ಯವೋ ಅದನ್ನೇ ಮಾಡಿದ್ದ. ಪಾರಿ ತನ್ನ ಹೆಣ್ಮಕ್ಕಳೊಂದಿಗೆ ಅಸಹಾಯಕಳಾಗಿ ನಿಂತಿದ್ದರೆ, ಬಸ್ರಾಜನ ಮಗ ಸಹಾಯಕ್ಕಾಗಿ ಮೇಸ್ತ್ರಿಯನ್ನು ಕರೆತರಲು ಹುಲ್ಲುಗುಡ್ಡೆಯ ಕಡೆ ಏದುಸಿರು ಬಿಡುತ್ತಾ ಓಡತೊಡಗಿದ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201
and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248